# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು

**(ಕರ್ನಾಟಕ ಸರ್ಕಾರ ಉದ್ಯಮ) (ಹಿಂದೆ ಕರ್ನಾಟಕ ಭೂಸೇನಾ ನಿಗಮಕ್ಕೆ ಸೇರಿದ್ದು)**

ಸಂಖ್ಯೆ: ಕೆಆರ್‌ಐಡಿಎಲ್/ಎಡಿಎಂ/40ನೇ ಎಜಿಎಂ/2014–15 ದಿನಾಂಕ : 23ನೇ ಮಾರ್ಚ್ 2015

## ಸದಸ್ಯರಿಗೆ ಸೂಚನಾ ಪತ್ರ

## 40ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

40ನೇ ವಾರ್ಷಿಕ ಸಾಮಾನ್ಯ ಸಭೆಯನ್ನು 31ನೇ ಮಾರ್ಚ್ 2015ರ ಮಂಗಳವಾರ ಸಂಜೆ 4.00 ಗಂಟೆಗೆ ಕಂಪನಿಯ ನೋಂದಾಯಿತ ಕಛೇರಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್, 4ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು – 560 009 ಇಲ್ಲಿ ಈ ಕೆಳಗಿನ ಸಾಮಾನ್ಯ ವಿಷಯಗಳ ಚರ್ಚೆಗಾಗಿ ಕರೆಯಲಾಗಿದೆ ಎಂದು ಈ ಮೂಲಕ ಸೂಚಿಸಲಾಗಿದೆ.

**ಸಾಮಾನ್ಯ ವ್ಯವಹಾರಗಳು:–**

1. 31ನೇ ಮಾರ್ಚ್ 2014ರ ಆಯವ್ಯಯ ಪತ್ರ, ಲಾಭ ಮತ್ತು ನಷ್ಟದ ಲೆಕ್ಕ, ನಿರ್ದೇಶಕರ ವರದಿ, ಲೆಕ್ಕ ಪರಿಶೋಧಕರ ವರದಿ ಮತ್ತು ಭಾರತ ಸರ್ಕಾರದ ಆಡಿಟರ್ ಜನರಲ್‌ರ ಟೀಕೆ–ಟಿಪ್ಪಣಿಗಳನ್ನು ಕಂಪನಿ ಕಾಯ್ದೆ 1956 ಅಧಿನಿಯಮ 619(4)ರ ಪ್ರಕಾರ ತಿಳಿಯಲು ಮತ್ತು ಅದನ್ನು ಅಂಗೀಕರಿಸಿ ಕಾರ್ಯರೂಪಕ್ಕೆ ತರಲು ನಿರ್ಧರಿಸಲಾಗಿದೆ.
2. 2013–14ನೇ ಸಾಲಿನ ಲಾಭಾಂಶ ಘೋಷಣೆ.
3. ಭಾರತದ ಮಹಾಲೇಖಪಾಲಕರು, ನವದೆಹಲಿ ಇವರು 2014–15 ನೇ ಸಾಲಿನ ಆರ್ಥಿಕ ಸಾಲಿಗೆ ಕಂಪನಿಯ ಶಾಸನಬದ್ಧ ಲೆಕ್ಕ ಪರಿಶೋಧಕರಾಗಿ ಮೆ॥ ಮಲ್ಯ ಅಂಡ್ ಮಲ್ಯ, ಚಾರ್ಟೆಡ್ ಅಕೌಂಟೆಂಟ್, ಬೆಂಗಳೂರು ಅವರನ್ನು ಆಡಳಿತ ಮಂಡಳಿ ನಿರ್ದೇಶಕರ ಶಿಫಾರಸ್ಸಿನ ಮೇರೆಗೆ ಸಂಭಾವನೆಯ ಆಧಾರದ ಮೇಲೆ ನೇಮಕ ಮಾಡಿರುತ್ತಾರೆ.

ನಿರ್ದೇಶಕ ಮಂಡಳಿ ಆದೇಶದ ಮೇರೆಗೆ
ಸಹಿ/–
**(ಹೆಚ್.ಪಿ. ಪ್ರಕಾಶ್, ಭಾಅಸೇ)**
**ವ್ಯವಸ್ಥಾಪಕ ನಿರ್ದೇಶಕರು**

**ದಿನಾಂಕ :** 23–03–2015
**ಸ್ಥಳ :** ಬೆಂಗಳೂರು

**ಸೂಚನೆ :** ಸಭೆಗೆ ಹಾಜರಾಗಲು ಅರ್ಹರಾದ ಸದಸ್ಯರು ತಮ್ಮ ಅನುಪಸ್ಥಿತಿಯಲ್ಲಿ ಒಬ್ಬ ಪ್ರಾಕ್ಸಿಯನ್ನು ನೇಮಿಸಬಹುದು. ಅವರು ನಿಗಮದ ಸದಸ್ಯರಾಗದಿದ್ದರೂ ಮತದಾನದಲ್ಲಿ ಪಾಲ್ಗೊಂಡು ಮತ ಚಲಾಯಿಸಲು ಮಾತ್ರ ಅರ್ಹರು.

ಯಥಾ ಪ್ರತಿಯನ್ನು,

- ಶ್ರೀ ಶ್ರೀಶೈಲ ಎಂ. ದಳವಾಯಿ, ಅಧ್ಯಕ್ಷರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು
- ಶ್ರೀ ಟಿ.ಎಂ. ವಿಜಯ ಭಾಸ್ಕರ್, ಭಾ.ಆ.ಸೇ., ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
- ಶ್ರೀ ಹೆಚ್.ಪಿ. ಪ್ರಕಾಶ್, ಭಾ.ಆ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು
- ಶ್ರೀ ಎಂ.ವಿ. ಸಾವಿತ್ರಿ, ಭಾ.ಆ.ಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
- ಶ್ರೀ ಕೆ. ಮುರಳೀಧರ್, ಸರ್ಕಾರದ ಅಧೀನ ಕಾರ್ಯದರ್ಶಿಗಳು (ಜಿಪಂ), ಹಣಕಾಸು ಇಲಾಖೆ (ಘನತೆವೆತ್ತ ರಾಜ್ಯಪಾಲರ ಪ್ರತಿನಿಧಿ)

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು

(ಕರ್ನಾಟಕ ಸರ್ಕಾರ ಉದ್ಯಮ) (ಹಿಂದೆ ಕರ್ನಾಟಕ ಭೂಸೇನಾ ನಿಗಮಕ್ಕೆ ಸೇರಿದ್ದು)

# ನಿರ್ದೇಶಕರ ವರದಿ

ಸದಸ್ಯರುಗಳಿಗೆ,

2014ರ ಮಾರ್ಚ್ 31ಕ್ಕೆ ಕೊನೆಯಾಗುವ ಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ವರದಿಯೊಂದಿಗೆ 40ನೇ ವಾರ್ಷಿಕ ವರದಿಯನ್ನು ಮಂಡಿಸಲು ನಿರ್ದೇಶಕರುಗಳಿಗೆ ಸಂತಸವಾಗಿದೆ.

## ಅವಲೋಕನ :-

ಕಂಪನಿಯು ಪ್ರಸಕ್ತ ಸಾಲಿನಲ್ಲಿ ತನ್ನ ಇತಿಹಾಸದಲ್ಲೇ ಅತಿ ಹೆಚ್ಚು ವಹಿವಾಟಾದ ರೂ.1319.72 ಕೋಟಿ ಸಾಧನೆ ಮಾಡಿದೆ. ಇದು ಕಳೆದ ವರ್ಷದ ವಹಿವಾಟದ ರೂ. 1087.48 ಕೋಟಿಗಳಿಗಿಂತ ಶೇಕಡ 21.35ರಷ್ಟು ಹೆಚ್ಚಾಗಿರುತ್ತದೆ. ಕಂಪನಿಯ ವಹಿವಾಟು ಹೆಚ್ಚಲು ಮುಖ್ಯ ಕಾರಣವೆಂದರೆ, ಸುವರ್ಣ ಗ್ರಾಮ ಕಾಮಗಾರಿಗಳು, ಬಿಬಿಎಂಪಿ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಕಾಮಗಾರಿಗಳು, ಆರ್‌ಓ ಘಟಕಗಳು ಹೆಚ್ಚಿನ ಕಾಮಗಾರಿ ವಹಿಸಿರುತ್ತಾರೆ. ಕಂಪನಿಯು ರೂ.69.11 ಕೋಟಿ ನಿವ್ವಳ ಲಾಭ ಮಾಡಿದ್ದು, ಇದು ರೂ. 34.15 ಕೋಟಿ ಆದಾಯ ತೆರಿಗೆ, ಬಾಕಿ ಸಾಲ ರೂ. 5.11 ಕೋಟಿಗಳು ಮತ್ತು ರೂ. 3.71 ಕೋಟಿಗಳಷ್ಟು ಅನುಗ್ರಹ ಭತ್ಯೆಯನ್ನು ನೌಕರರಿಗೆ ನೀಡಲು ಒದಗಣೆ ಮಾಡಿದ ನಂತರ ಗಳಿಸಿದೆ.

ಕಂಪನಿಯು ತನ್ನ ಇತಿಹಾಸದಲ್ಲಿ ಸತತ ನಾಲ್ಕು ವರ್ಷಗಳಿಂದ ಸರ್ಕಾರದ ಬಂಡವಾಳದ ಮೇಲೆ ಡಿವಿಡೆಂಡ್ ನೀಡುತ್ತಿದೆ. ಪ್ರಸ್ತುತ ವರ್ಷದಲ್ಲಿ ರೂ. 2.45 ಕೋಟಿ (ಬಂಡವಾಳದ ಮೇಲೆ ಶೇ. 20ರಷ್ಟು) ಡಿವಿಡೆಂಡ್ ಲಾಭಾಂಶದಲ್ಲಿ ಘೋಷಣೆ ಮಾಡಿದೆ.

ಕಂಪನಿಯ ಆಸ್ತಿ ಪ್ರಸಕ್ತ ಸಾಲಿನಲ್ಲಿ ಶೇಕಡ 42.49 ರಷ್ಟು ಹೆಚ್ಚಾಗಿದ್ದು, ಕಳೆದ ವರ್ಷದಲ್ಲಿ ರೂ.155.84 ಕೋಟಿಗಳಿಂದ ಈ ವರ್ಷಕ್ಕೆ ರೂ. 222.06 ಕೋಟಿಗಳಿಗೆ ತಲುಪಿದೆ. ಈ ಹೆಚ್ಚಳಕ್ಕೆ ಮುಖ್ಯ ಕಾರಣಗಳೆಂದರೆ, ಕಂಪನಿಯು ಸಾಧಿಸಿರುವ ಹೆಚ್ಚಿನ ವಹಿವಾಟು ಮತ್ತು 2008-09 ರ ನಂತರ ಸತತವಾಗಿ ಗಳಿಸುತ್ತಿರುವ ನಿವ್ವಳ ಲಾಭ.

ತಾರೀಖು 31.03.2014ರ ಅಂತ್ಯದಲ್ಲಿ ಪೂರ್ಣಗೊಳಿಸಿ ಹೊಂದಾಣಿಕೆ ಮಾಡದೆ ಇದ್ದ ಕಾಮಗಾರಿಗಳ ಮೊತ್ತ ರೂ.3008.81 ಕೋಟಿ ಇದ್ದು ಕೆಳೆದ ಸಾಲಿನಲ್ಲಿ ರೂ.1958.19 ಕೋಟಿ ಇತ್ತು. ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ.744.67 ಕೋಟಿ ಹಾಗೂ ಕಳೆದ ವರ್ಷ ರೂ.271.89 ಕೋಟಿಗಳನ್ನು ಅಂತಿಮ ಬಿಲ್ಲುಗಳನ್ನು ಹೊಂದಾಣಿಕೆ ಮಾಡಿಕೊಂಡಿದೆ. ಹಿಂದಿನ ವರ್ಷದಲ್ಲಿ ಸಣ್ಣಪುಟ್ಟ ಸಾಲಗಾರರ ಮೊತ್ತ ರೂ.86.08 ಲಕ್ಷ ಕಳೆದ ವರ್ಷ ರೂ.4.85 ಕೋಟಿ ಇರುತ್ತದೆ. ಅಂತಿಮ ಬಿಲ್ಲುಗಳ ಹೊಂದಾಣಿಕೆಯಿಂದ ಪ್ರಸ್ತುತ ವರ್ಷದಲ್ಲಿ ರೂ. 2.11ಕೋಟಿ ಆದಾಯ ಬಂದಿರುತ್ತದೆ ಹಾಗೂ ಹಿಂದಿನ ವರ್ಷದಲ್ಲಿ ರೂ.5.04 ಕೋಟಿ ಆದಾಯ ಬಂದಿರುತ್ತದೆ.

## ಆರ್ಥಿಕ ಪ್ರಗತಿ :-

ಪ್ರಸಕ್ತ ವರ್ಷದ ಕಂಪನಿಯ ಆರ್ಥಿಕ ಪ್ರಗತಿ ಈ ಕೆಳಕಂಡಂತಿದೆ: (ಲಕ್ಷ ರೂ.ಗಳಲ್ಲಿ)

| ವಿವರಗಳು | 2013-14 | 2012-13 | 2011-12 |
|---|---|---|---|
| ವಹಿವಾಟು | 131971.85 | 108747.95 | 78897.66 |
| ಇತರೆ ಆದಾಯ | 4325.00 | 5443.03 | 4268.17 |
| ಒಟ್ಟು ಆದಾಯ | 136296.85 | 114190.98 | 83165.83 |
| ನೇರ ಕಾಮಗಾರಿ ವೆಚ್ಚ | 121767.87 | 99586.16 | 74764.06 |
| ಇತರೆ ವೆಚ್ಚ | 4221.70 | 6760.44 | 4942.83 |
| ಸವಕಳಿಗೆ ಮುನ್ನ ವರ್ಷದ ಲಾಭ/(ನಷ್ಟ) | 10410.14 | 7845.38 | 3458.94 |
| ಸವಕಳಿ | 102.86 | 95.82 | 58.17 |
| ಸವಕಳಿಗೆ ನಂತರ ವರ್ಷದ ಲಾಭ/(ನಷ್ಟ) | 10326.30 | 7749.56 | 3400.77 |

| ವಿವರಗಳು | 2013–14 | 2012–13 | 2011–12 |
|---|---|---|---|
| ಪ್ರಸ್ತುತ ವರ್ಷದ ತೆರಿಗೆ | 3415.30 | 2087.13 | 1121.96 |
| ತೆರಿಗೆ ನಂತರದ ಆದರೆ ಮುಂದೂಡಲಾದ ತೆರಿಗೆಗೆ ಮೊದಲಿನ ಲಾಭ/ (ನಷ್ಟ) | 6882.18 | 5662.43 | 2278.81 |
| ಮುಂದೂಡಲಾದ ತೆರಿಗೆ(ನಿವ್ವಳ)ಸಿಆರ್/(ಡಿಆರ್) | 28.82 | (531.25) | 865.17 |
| ತೆರಿಗೆ ನಿರ್ಧರಣೆ ನಂತರದ ಲಾಭ/(ನಷ್ಟ) | **6911.00** | **5131.18** | **3143.98** |

### ಲಾಭಾಂಶ :–

ಕಂಪನಿಯು ಗಳಿಸಿದ ಲಾಭ ಮತ್ತು ಮುಂದಿನ ದಿನಗಳಿಗೆ ಬೇಕಾಗುವ ಹಣಕಾಸಿನ ಅಗತ್ಯತೆಗಳನ್ನು ಪರಿಗಣಿಸಿ, ಆಡಳಿತ ಮಂಡಳಿಯು ಪ್ರತಿ ರೂ.1000/– ಷೇರಿಗೆ ರೂ.200/–ಗಳನ್ನು ಲಾಭಾಂಶವಾಗಿ (ಶೇಕಡ 20) ನೀಡಲು ಶಿಫಾರಸ್ಸು ಮಾಡಿದ್ದು, ಕಳೆದ ವರ್ಷ ರೂ. 200/– ಗಳನ್ನು ಲಾಭಾಂಶವಾಗಿ (ಶೇಕಡ 20) ನೀಡಲಾಗಿತ್ತು.

### ಕಾರ್ಯನಿರ್ವಹಣೆ :–

ಆಡಳಿತ ಮಂಡಳಿಯು ಹೆಚ್ಚಿನ ಮೊತ್ತದ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಗೃಹ ಮಂಡಳಿ ಮಾದರಿಯ ಕಾಮಗಾರಿಗಳನ್ನು ಅಳವಡಿಸಲು ಚಿಂತನೆ ನಡೆಸಿದ್ದು, ನೊಂದಾಯಿತ ಗುತ್ತಿಗೆದಾರರಲ್ಲಿ ಬಿಡ್ ಕರೆದು ಕಾಮಗಾರಿ ನಿರ್ವಹಿಸಲು ತೀರ್ಮಾನಿಸಿದೆ. ಈ ಮಾದರಿಯಿಂದ ನಿಗಮವು ತನ್ನ ವಹಿವಾಟನ್ನು ದುಪ್ಪಟ್ಟುಗೊಳಿಸಬಹುದು ಹಾಗೂ ಇಂಜಿನಿಯರ್‌ಗಳ ಅಗತ್ಯತೆ ಸಹ ಕಡಿಮೆ ಇರುತ್ತದೆ. ಈ ಮಾದರಿಯನ್ನು ಆಡಳಿತ ಮಂಡಳಿ ಈಗಾಗಲೇ ಅನುಮೋದಿಸಿದ್ದು, ಇಂಜಿನಿಯರ್‌ಗಳ ಸಂಖ್ಯೆ ಕಡಿಮೆಯಾಗುತ್ತಿರುವ ಈ ಸನ್ನಿವೇಶದಲ್ಲಿ ಈ ಮಾದರಿ ಬಹಳ ಅಗತ್ಯವಿರುತ್ತದೆ.

### ಹಣಕಾಸು ಸ್ಥಿತಿ :–

ಕಂಪನಿಯ ಆರ್ಥಿಕ ಸ್ಥಿತಿಯನ್ನು ಈ ಮುಂದಿನ ಅಂಕಿಅಂಶಗಳು ವ್ಯಕ್ತಪಡಿಸುತ್ತದೆ:

| ವಿವರಗಳು | 2013–14 | 2012–13 | 2011–12 |
|---|---|---|---|
| ಸಂದಾಯ ಮಾಡಿದ ಈಕ್ವಿಟಿ ಬಂಡವಾಳ | 1225.00 | 1225.00 | 1225.00 |
| ಮೀಸಲು ಮತ್ತು ನಿಧಿಗಳು | 20981.54 | 14359.06 | 9798.37 |
| ದೀರ್ಘಾವಧಿ ಸಾಲಗಳು | 875.05 | 2130.70 | 3385.58 |
| ಇತರೆ ದೀರ್ಘಕಾಲದ ಹೊಣೆಗಾರಿಕೆಗಳು | 3956.91 | 3694.30 | 3421.77 |
| ಪ್ರಸಕ್ತ ಹೊಣೆಗಾರಿಕೆಗಳು ಮತ್ತು ಉಪಬಂಧಗಳು | 391537.08 | 276131.63 | 228228.85 |
| ಒಟ್ಟು | **418575.58** | **297540.69** | **246059.57** |
| ನಿವ್ವಳ ಸ್ಥಿರ ಆಸ್ತಿಗಳು | 3989.30 | 3888.79 | 3659.61 |
| ಪ್ರಸ್ತುತವಲ್ಲದ ಆಸ್ತಿಗಳು | 12843.07 | 12616.90 | 12955.83 |
| ಪ್ರಸ್ತುತ ಆಸ್ತಿಗಳು | 401743.21 | 281035.00 | 229444.13 |
| ಒಟ್ಟು | 418575.58 | **297540.69** | **246059.57** |
| ನಿವ್ವಳ ಆಸ್ತಿ | 22206.54 | **15584.06** | **11023.37** |

### ಷೇರು ಬಂಡವಾಳ :-

ಕಂಪನಿಯ ಅಧಿಕೃತ ಷೇರು ಬಂಡವಾಳ 2014ರ ಮಾರ್ಚ್ 31ರ ವೇಳೆಗೆ 1500 ಲಕ್ಷ ರೂ.ಗಳು ಮತ್ತು ಸಂದಾಯ ಮಾಡಿದ ಬಂಡವಾಳ 1225 ಲಕ್ಷ ರೂ.ಗಳು.

### ಸ್ಥಿರ ಠೇವಣಿಗಳು :-

ಕಂಪನಿಗಳ ಕಾಯ್ದೆ 1956ರ ಅಧಿನಿಯಮ 58ಎ ಅಡಿ ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿ ಅಂಗೀಕರಿಸಿಲ್ಲ.

### ಗುಣಮಟ್ಟ :-

ಕಂಪನಿಯು ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸುವತ್ತ ಹೆಚ್ಚಿನ ಗಮನ ನೀಡುವುದನ್ನು ಮುಂದುವರೆಸಿದೆ ಹಾಗೂ ಕೆಲಸಗಳನ್ನು ಸಾಮಾನ್ಯವಾಗಿ ವೇಳಾಪಟ್ಟಿ ಮಿತಿಯೊಳಗೆ ನಿರ್ವಹಿಸಲಾಗುತ್ತದೆ. ಆರ್‌ಡಿಪಿಆರ್ ಇಲಾಖೆ ಇಲಾಖೆ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ಸೂಚನೆಯಂತೆ ಕೆಆರ್‌ಆರ್‌ಡಿಎನಲ್ಲಿ ಸರಿಸಮಾನವಾದ ಅನುಷ್ಠಾನ ಪದ್ಧತಿ ಪರಿಚಯಿಸಿ ಮೂರು ಸುತ್ತಿನ ಗುಣಮಟ್ಟ ನಿಯಂತ್ರಣ ಪ್ರಕ್ರಿಯೆಯನ್ನು ನಡೆಸಿ ಕೆಆರ್‌ಐಡಿಎಲ್‌ನಲ್ಲಿ ನಿರ್ಮಾಣ ಕಾಮಗಾರಿಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲಾಗಿದೆ. ಅನುಷ್ಠಾನಗೊಳಿಸಲು ಹಾಗೂ ಜಿಲ್ಲಾ ಗುಣಮಟ್ಟ ಮಾನಿಟರ್ ಮತ್ತು ರಾಜ್ಯ ಗುಣಮಟ್ಟ ಮಾನಿಟರ್‌ಗಾಗಿ 2014 ಜನವರಿ ಸಾಲಿನಲ್ಲಿ ಈ ಪ್ರಕ್ರಿಯೆ ಆರಂಭಿಸಲಾಯಿತು. 3 ಸುತ್ತಿನ ಗುಣಮಟ್ಟ ನಿರ್ವಹಣಾ ವ್ಯವಸ್ಥೆಯ ಅನುಷ್ಠಾನಕ್ಕಾಗಿ 12 ಸಂಖ್ಯೆಯ ಜಿಲ್ಲಾ ಗುಣಮಟ್ಟ ಮಾನಿಟರ್‌ನಲ್ಲಿ ನಿವೃತ್ತ ಕಾರ್ಯಪಾಲಕ ಅಭಿಯಂತರರು/ಸಹಾಯಕ ಪ್ರಾಧ್ಯಾಪಕರು ಹಾಗೂ 2 ಜನ ರಾಜ್ಯ ಗುಣಮಟ್ಟ ನಿರ್ವಹಣ ಮಾನಿಟರ್‌ನಲ್ಲಿ ನಿವೃತ್ತ ಸಧೀಕ್ಷಕ ಅಭಿಯಂತರರು/ಪ್ರಾಧ್ಯಾಪಕರು ಇದ್ದಾರೆ. ಬಹುತೇಕ ಡಾಕಿಮೆಂಟ್ರಿ ದಾಖಲೆಗಳು/ನಮೂನೆಗಳು/ಮಾರ್ಗಸೂಚಿಗಳನ್ನು ಕೆಆರ್‌ಆರ್‌ಡಿಎ ಅಧಿಕಾರಿಗಳ ಸಮಾಲೋಚನೆ ಮೂಲಕ ತಯಾರಿಸಲಾಗಿದೆ ಹಾಗೂ ಕೆಆರ್‌ಐಡಿಎಲ್ ಕಾಮಗಾರಿಗಳ ಪದ್ಧತಿಯಲ್ಲಿ ಐಎಸ್ ಕೋಡ್‌ಗಳು ಹಾಗೂ ಇಂಜಿನಿಯರಿಂಗ್ ಪುಸ್ತಕಗಳನ್ನು ಉಲ್ಲೇಖಿಸಲಾಗಿದೆ. ಎಲ್ಲ ದಾಖಲೆಗಳನ್ನು ಕೆಆರ್‌ಐಡಿಎಲ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಪ್ರತಿಕ್ರಿಯೆಗಳನ್ನು ಎಲ್ಲ ಸಂಬಂಧಿತ ವಿಭಾಗದಲ್ಲಿ ಪಡೆದುಕೊಳ್ಳಲಾಗಿದೆ ಹಾಗೂ ಪ್ರತಿಕ್ರಿಯೆ ಪಡೆದುಕೊಂಡ ನಂತರ ಅಂತಿಮ ದಾಖಲೆಗಳನ್ನು ಕೆಆರ್‌ಐಡಿಎಲ್ ವೆಬ್‌ಸೈಟ್ www.kridl.gov.in. ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

ಇಂಜಿನಿಯರ್‌ಗಳು ಹಾಗೆಯೇ ಡಿಕ್ಯೂಎಂಗಳ ಸಮೀಕ್ಷೆಯ ವೇಳೆಯಲ್ಲಿ ಅವರಿಗೆ ಅನುಕೂಲವಾಗಲೆಂದು ಪ್ರತಿ ಉಪವಿಭಾಗದಲ್ಲಿನ ಕ್ಷೇತ್ರ ಪ್ರಯೋಗಾಲಯಗಳಿಗೆ ಕ್ಯೂಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು ತುಂಬ ಅತ್ಯಗತ್ಯವಾಗಿತ್ತು. ಆದ್ದರಿಂದ, ಸಂಸ್ಥೆಯು 1 ನೇ ಘಟ್ಟದಲ್ಲಿನ ವಿಭಾಗ ಕಚೇರಿ ವಲಯಕ್ಕಾಗಿ ಪರೀಕ್ಷಾ ಸಲಕರಣೆಗಳನ್ನು ಖರೀದಿಸಿದೆ. ಎಲ್ಲ ವಿಭಾಗಗಳಿಗೆ ಇಲಾಖಾ ವಾಹನದಲ್ಲಿ ಪರೀಕ್ಷಾ ಸಲಕರಣೆಗಳೊಂದಿಗೆ ಸಂಚಾರಿ ಪ್ರಯೋಗಾಲಯಗಳನ್ನು ಸ್ಥಾಪಿಸಲು ನಿರ್ದೇಶನಗಳೊಂದಿಗೆ ಕ್ಷೇತ್ರ ಪರೀಕ್ಷಾ ಸಲಕರಣೆಗಳನ್ನು ಒದಗಿಸಲಾಯಿತು.

### ಕೆಆರ್‌ಐಡಿಎಲ್‌ನಲ್ಲಿ ಮೂರು ಹಂತದ ಗುಣಮಟ್ಟ ನಿಯಂತ್ರಣ ವ್ಯವಸ್ಥೆ :-

ಕೆಆರ್‌ಐಡಿಎಲ್‌ನಲ್ಲಿ ಎಲ್ಲ ಅಭಿಯಂತರರಿಗೂ ಪರೀಕ್ಷೆ ಹಮ್ಮಿಕೊಳ್ಳಲು ತಿಳಿಸಿ ಎಲ್ಲ ಅಭಿಯಂತರರು, ತಾಂತ್ರಿಕ ಸಹಾಯಕ ಅಭಿಯಂತರರು ಹಾಗೂ ತಾಂತ್ರಿಕ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ತರಬೇತಿ ನೀಡುವುದಕ್ಕೆ ಮೊದಲ ಹಂತದ ಸುತ್ತಿನ ಗುಣಮಟ್ಟ ಮಾನಿಟರ್ ವ್ಯವಸ್ಥೆ ಆರಂಭಿಸುವುದಕ್ಕೆ ಮೊದಲು ಉಪ ವಿಭಾಗ ಮಟ್ಟದಲ್ಲಿ ಗುಣಮಟ್ಟದ ನಿಯಂತ್ರಣ ವ್ಯವಸ್ಥೆಯ ಮೊದಲು ಮೂರು ಸುತ್ತಿನ ಅನುಷ್ಠಾನಕ್ಕಾಗಿ ನಿಗದಿ ಪಡಿಸಿದ ಗುಣಮಟ್ಟ ನಿಯಂತ್ರಣ ನೋಂದಣಿ ಭಾಗ-1ರಲ್ಲಿ ಫಲಿತಾಂಶವನ್ನು ದಾಖಲಿಸಲಾಯಿತು.

2ನೇ ಹಂತದ ಗುಣಮಟ್ಟ ನಿಯಂತ್ರಣ ಮಾನಿಟರಿಂಗ್ ವ್ಯವಸ್ಥೆಗೆ, ಕಾಮಗಾರಿಗಳ ಸಮೀಕ್ಷೆಗಾಗಿ ಡಿಕ್ಯೂಎಂ'ಗಳಿಗೆ ಪ್ರವಾಸ ಕಾರ್ಯಕ್ರಮವನ್ನು ಒದಗಿಸಲಾಯಿತು. ಎಲ್ಲ 12 ಸಂಖ್ಯೆಯ ಡಿಕ್ಯೂಎಂಗಳು ಎಲ್ಲ 30 ಜಿಲ್ಲೆಗಳ ಕಾಮಗಾರಿಗಳನ್ನು ಪರೀಕ್ಷಿಸಲಾಯಿತು ಹಾಗೂ ನಿಗದಿತ ನಮೂನೆಯಲ್ಲಿ ಅವರ ವರದಿಗಳನ್ನು ಸಲ್ಲಿಸಿದರು. ಗುಣಮಟ್ಟ ನಿಯಂತ್ರಣ ಕೇಂದ್ರ, ಮುಖ್ಯ ಕಚೇರಿಯಲ್ಲಿ ಆ ವಿಷಯವನ್ನು ಮೌಲ್ಯಮಾಪನ ಮಾಡಲಾಯಿತು. ಎಲ್ಲಿಲ್ಲಿ ಅಗತ್ಯವಿದ್ದ ಸರಿಪಡಿಸುವ ಕ್ರಮಗಳಿಗೆ ಅಗತ್ಯ ಸಲಹೆಗಳನ್ನು ನೀಡಲಾಯಿತು ಹಾಗೂ ನಿರ್ಮಾಣಗಳ ಕಾಮಗಾರಿಗಳಲ್ಲಿ ಗುಣಮಟ್ಟದ ಸುಧಾರಣೆಗಳನ್ನು ನೀಡಲಾಗುವುದು. ಈ ಪ್ರಕ್ರಿಯೆ ಮುಂದುವರಿಯಲಿದೆ.

## ಕಂಪನಿಯು ಕೈಗೊಂಡ ಪ್ರಮುಖ ಯೋಜನೆಗಳು :-

ಪ್ರಸಕ್ತ ವರ್ಷದಲ್ಲಿ ಕಂಪನಿಗೆ ಸರ್ಕಾರದ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ವಹಿಸಿದ ಕಾಮಗಾರಿಯ ಯೋಜನೆಗಳು ಕೆಳಗಿನಂತಿವೆ.

ಅ) **ಸುವರ್ಣ ಗ್ರಾಮ ಯೋಜನೆ :-** ಸರ್ಕಾರವು ಸುವರ್ಣ ಗ್ರಾಮ ಯೋಜನೆ ಹಂತ-1 ರಿಂದಲೂ ಕಾಮಗಾರಿಗಳನ್ನು ಕಂಪನಿಗೆ ವಹಿಸಿಕೊಡುತ್ತಿದೆ. ಈಗ ಪ್ರಸ್ತುತ ಹಂತ-5 ಚಾಲ್ತಿಯಲ್ಲಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು 1372 ಕಾಮಗಾರಿಗಳನ್ನು ಮಾಡಲು ನಿರ್ಧರಿಸಿದ್ದು, ಅದರಲ್ಲಿ 469 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಕಂಪನಿಯು ರೂ. 191.42 ಕೋಟಿಗಳನ್ನು ಪ್ರಸ್ತುತ ವರ್ಷದಲ್ಲಿ ಪಡೆದಿರುತ್ತದೆ ಹಾಗೂ 2012-13ನೇ ಸಾಲಿನಲ್ಲಿ ವಿವಿಧ ಹಂತಗಳ ಕಾಮಗಾರಿಗಳಿಗೆ ರೂ. 150.00 ಕೋಟಿ ಪಡೆದಿತ್ತು. ಕಂಪನಿಯು ಪ್ರಸ್ತುತ ವರ್ಷದಲ್ಲಿ ರೂ.248.37 ಕೋಟಿಗಳನ್ನು ವ್ಯಯಿಸಲಾಗಿರುತ್ತದೆ ಹಾಗೂ ಕಳೆದ ವರ್ಷದಲ್ಲಿ 215.61 ಕೋಟಿ ಖರ್ಚು ಮಾಡಿರುತ್ತದೆ.

ಆ) **ಸಮಾಜ ಕಲ್ಯಾಣ ಇಲಾಖೆಯ ಕಾಮಗಾರಿಗಳು :-** ಸಮಾಜ ಕಲ್ಯಾಣ ಇಲಾಖೆಯು ರಾಜ್ಯದ ವಿವಿಧ ಭಾಗಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ಕಟ್ಟಲು ಕಂಪನಿಗೆ ವಹಿಸಿರುತ್ತದೆ. 2013-14ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯು 419 ಸ್ಥಳಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ರೂ. 128.36 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ವಹಿಸಲಾಗಿದೆ. ಹಿಂದಿನ ಸಾಲಿನಲ್ಲಿ ಕಂಪನಿಯು ರೂ. 27.00 ಕೋಟಿ ವೆಚ್ಚ ಮಾಡಿತ್ತು ಹಾಗೂ ಪ್ರಸಕ್ತ ಸಾಲಿನಲ್ಲಿ ರೂ. 59.03 ಕೋಟಿ ರೂ. ಗಳನ್ನು ವೆಚ್ಚ ಮಾಡಿರುತ್ತದೆ. ಕಂಪನಿಯು 146 ಹಾಸ್ಟೆಲ್ ಕಟ್ಟಡಗಳನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ ಹಾಗೂ ಉಳಿದ 385 ಕಟ್ಟಡಗಳು ಪೂರ್ಣಗೊಳ್ಳುವ ವಿವಿಧ ಹಂತಗಳಲ್ಲಿರುತ್ತವೆ.

ಇ) **ಗ್ರಾಮ ಪಂಚಾಯಿತಿ ಕಟ್ಟಡಗಳು :-** ಸರ್ಕಾರವು ನಬಾರ್ಡ್ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ಗ್ರಾಮ ಪಂಚಾಯಿತಿ ಕಟ್ಟಡಗಳ ನಿರ್ಮಾಣವನ್ನು ಪ್ರಾರಂಭಿಸಿರುತ್ತದೆ. ವಿವಿಧ ಜಿಲ್ಲಾ ಪಂಚಾಯಿತಿಗಳು 454 ಗ್ರಾಮ ಪಂಚಾಯಿತಿ ಕಟ್ಟಡಗಳನ್ನು 126 ತಾಲ್ಲೂಕುಗಳಲ್ಲಿ ಮೊದಲ ನಾಲ್ಕು ಹಂತದಲ್ಲಿ ಕಂಪನಿಗೆ ವಹಿಸಿರುತ್ತದೆ. ಇದರಲ್ಲಿ 408 ಕಟ್ಟಗಳನ್ನು ಕಂಪನಿಯು ತೆಗೆದುಕೊಂಡಿರುತ್ತದೆ. ಈ ಕಾಮಗಾರಿಗಳ ಅಂದಾಜು ವೆಚ್ಚ ರೂ.78.18 ಕೋಟಿಗಳಿದ್ದು, ಜಿಲ್ಲಾ ಪಂಚಾಯಿತಿಗಳು ರೂ. 69.06 ಕೋಟಿಗಳನ್ನು ನಿಗಮಕ್ಕೆ ಬಿಡುಗಡೆ ಮಾಡಿರುತ್ತದೆ. ನಿಗಮವು 31.03.2014ಕ್ಕೆ ರೂ. 63.09 ಕೋಟಿ ಆರ್ಥಿಕ ಪ್ರಗತಿಯನ್ನು ಸಾಧಿಸಿದ್ದು, 352 ಕಟ್ಟಡಗಳ ನಿರ್ಮಾಣವನ್ನು ಪೂರ್ಣಗೊಳಿಸಿರುತ್ತದೆ ಹಾಗೂ ಉಳಿದ ಕಟ್ಟಡಗಳ ನಿರ್ಮಾಣದ ಕಾರ್ಯವು ವಿವಿಧ ಹಂತದಲ್ಲಿದೆ.

ಈ) **ಬಿಬಿಎಂಪಿ ಕಾಮಗಾರಿಗಳು :-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಕಾಮಗಾರಿಗಳಾದ ರಸ್ತೆ ಅಗಲೀಕರಣ, ಡಾಂಬರೀಕರಣ, ಒಳಚರಂಡಿ ನಿರ್ಮಾಣ, ಕಡಿಮೆ ವೆಚ್ಚದ ಮನೆಗಳ ನಿರ್ಮಾಣ, ಸಮುದಾಯ ಭವನಗಳ ನಿರ್ಮಾಣ, ಶೌಚಾಲಯ ನಿರ್ಮಾಣ, ಬಸ್ ನಿಲ್ದಾಣ ನಿರ್ಮಾಣ, ತ್ಯಾಜ್ಯ ಸಂಸ್ಕರಣಾ ಕೇಂದ್ರಗಳ ನಿರ್ಮಾಣ ಇತ್ಯಾದಿಗಳನ್ನು ಕಂಪನಿಗೆ ವಹಿಸಲಾಗಿರುತ್ತದೆ. ಪ್ರಸ್ತುತ ವರ್ಷದಲ್ಲಿ ಬಿಬಿಎಂಪಿಯು 679.49 ಕೋಟಿ ರೂ. ವೆಚ್ಚದಲ್ಲಿ 2892 ಕಾಮಗಾರಿಗಳನ್ನು ವಹಿಸಿರುತ್ತದೆ. ನಿಗಮವು ಸುಮಾರು ರೂ. 499.72 ಕೋಟಿಗಳ ಕಾಮಗಾರಿಗಳನ್ನು ಪ್ರಸ್ತುತ ವರ್ಷದಲ್ಲಿ ಪೂರ್ಣಗೊಳಿಸಿದೆ.

ಉ) **ಆರ್‌ಓ ಘಟಕಗಳು :-** ಕರ್ನಾಟಕ ಸರ್ಕಾರವು ಗ್ರಾಮೀಣ ಜನರು ಕುಡಿಯುವ ನೀರಿನಲ್ಲಿ ಫ್ಲೋರೈಡ್, ಆರ್ಸೆನಿಕ್, ಕಬ್ಬಿಣ, ನೈಟ್ರೇಟ್, ಲವಣಾಂಶ ಹೆಚ್ಚಾಗಿ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿರುವ ಕಾರಣ ಗುಣಮಟ್ಟದ ಕುಡಿಯುವ ನೀರು ಸರಬರಾಜು ಮಾಡುವ ಸಲುವಾಗಿ ಈ ಉದಾತ್ತ ಯೋಜನೆಯನ್ನು ಪ್ರಾರಂಭಿಸಿದೆ.ಕಲುಷಿತ ಮಟ್ಟದ ಪ್ರಮಾಣ ಹೆಚ್ಚಿರುವ 20 ಜಿಲ್ಲೆಗಳ 1000 ಗ್ರಾಮಗಳಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಯೋಜನೆಯನ್ನು ನಿರ್ವಹಿಸಲು ನಮ್ಮ ಸಂಸ್ಥೆಗೆ ಅಂದಾಜು ರೂ. 53.30 ಕೋಟಿ ಮೊತ್ತ ಒದಗಿಸಲಾಯಿತು. ನಮ್ಮ ಕೆಲಸ ಸಿವಿಲ್ ಹಾಗೂ ಎಲೆಕ್ಟ್ರಿಕಲ್ ಕಾಮಗಾರಿಗಳೊಂದಿಗೆ ವಿವಿಧ ರೀತಿಯ ಘಟಕಗಳ ನಿರ್ಮಾಣಕ್ಕಾಗಿ ಸೀಮಿತವಾಗಿತ್ತು. ಘಟಕಗಳ ಸ್ಥಾಪನೆ ಮತ್ತು ಇದರ ನಿರ್ವಹಣೆಗಾಗಿ ಕೆಆರ್ಐಡಿಯಿಂದ ಟೆಂಡರ್ ಮೂಲಕ ಖಾಸಗಿ ಸಂಸ್ಥೆಗಳಿಗೆ ನೀಡಲಾಯಿತು. ನಾವು 912 ಘಟಕಗಳನ್ನು ಆರಂಭಿಸಿ ರೂ. 45.95 ಕೋಟಿ ಹಣವನ್ನು ಸ್ವೀಕರಿಸಲಾಯಿತು. ಈ ಯೋಜನೆಗೆ ಒಟ್ಟು ರೂ. 45.50 ಕೋಟಿ ವೆಚ್ಚವಾಯಿತು. ನಾವು 865 ಘಟಕಗಳನ್ನು ಪೂರ್ಣಗೊಳಿಸಿ ಕಾರ್ಯಚಾಲನೆಗೆ ಹಸ್ತಾಂತರಿಸಿದೆವು. ಉಳಿದ 47 ಘಟಕಗಳು ವಿವಿಧ ಹಂತದಲ್ಲಿ ನಿರ್ಮಾಣದಲ್ಲಿವೆ. ನಿವೇಶನ ಸಿಗದ ಕಾರಣ 88 ಘಟಕಗಳನ್ನು ಆರಂಭಿಸಲಾಗಿಲ್ಲ.

**ಬಿ) ರೈತ ಸಂಪರ್ಕ ಕೇಂದ್ರಗಳು:–** ಕೃಷಿ ಇಲಾಖೆಯು 2013–14 ನೇ ಸಾಲಿನಲ್ಲಿ 66.02 ಕೋಟಿ ರೂ ವೆಚ್ಚದೊಂದಿಗೆ ರಾಜ್ಯದ ವಿವಿಧ ಸ್ಥಳಗಳಲ್ಲಿ 169 ರೈತ ಸಂಪರ್ಕ ಕೇಂದ್ರಗಳನ್ನು ನಿರ್ಮಾಣದ ಕಾಮಗಾರಿ ನೀಡಲಾಯಿತು. ಸಂಸ್ಥೆಯು ಈ ವರ್ಷದ ಸಾಲಿನಲ್ಲಿ 22.37 ಕೋಟಿ ರೂ. ಗಳನ್ನು ಸ್ವೀಕರಿಸಲಾಗಿದೆ ಹಾಗೂ 2014–15 ನೇ ಸಾಲಿನಹೊತ್ತಿಗೆ ಪೂರ್ಣಗೊಳಿಸಲಾಗುತ್ತದೆ.

## ಇತರೆ ಕಾಮಗಾರಿಗಳು :–

ಕಂಪನಿಯು ಪ್ರವಾಸೋದ್ಯಮ ಇಲಾಖೆ, ಮೀನುಗಾರಿಕೆ ಇಲಾಖೆ, ಅರಣ್ಯ ಇಲಾಖೆ, ತೋಟಗಾರಿಕೆ ಮತ್ತು ಕೃಷಿ ಇಲಾಖೆ, ಪಶು ವೈದ್ಯ ಇಲಾಖೆ, ಬಸವ ವಸತಿ ಯೋಜನೆ, ತಾಂಡಾ ಅಭಿವೃದ್ಧಿ ಕಾರ್ಯಗಳು, ರಾಜೀವ್ ಗಾಂಧಿ ಜಿಲ್ಲಾ ಸಂಪನ್ಮೂಲ ಕೇಂದ್ರಗಳು, ಬಿಎಂಆರ್‌ಸಿಎಲ್, ಶಿಕ್ಷಣ ಇಲಾಖೆ ಕಾರ್ಯಗಳು ಹಾಗೂ ಇತರೆ ಸರ್ಕಾರ ಸಂಸ್ಥೆಗಳಿಂದಲೂ ಮತ್ತು ಸ್ಥಳೀಯ ಸಂಸ್ಥೆಗಳಿಂದಲೂ ಕೆಲಸಗಳನ್ನು ಪಡೆಯುತ್ತಿದೆ. ಶಾಸಕರು ಮತ್ತು ಸಂಸದರೂ ಸಹ ತಮ್ಮ ಅಭಿವೃದ್ಧಿ ನಿಧಿಯ ಕೆಲಸಗಳನ್ನು ಕಂಪನಿಗೆ ವಹಿಸಿಕೊಡುತ್ತಿದ್ದಾರೆ. ಇದರಲ್ಲಿ ಕಂಪನಿಯು ಪ್ರಸಕ್ತ ವರ್ಷದಲ್ಲಿ ರೂ. 404.01 ಕೋಟಿ ಪ್ರಗತಿ ಸಾಧಿಸಿದೆ.

## ಮುಂದಿನ ದೃಷ್ಟಿಕೋನ :–

ನಿಮ್ಮ ನಿರ್ದೇಶಕರು ಕಂಪನಿಯು ಮುಂಬರುವ ವರ್ಷಗಳಲ್ಲಿ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಗುರಿ, ಧ್ಯೇಯಗಳನ್ನು ರೂಪಿಸಿ, ಕಂಪನಿಯ ಒಟ್ಟಾರೆ ಅಭಿವೃದ್ಧಿ ಮತ್ತು ಲಾಭಾಂಶ ಹೆಚ್ಚಿಸಲು ಸೂಕ್ತ ಕ್ರಮ ಕೈಗೊಂಡಿದ್ದಾರೆ. ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಒತ್ತು ನೀಡುತ್ತಿದೆ. ನಮ್ಮ ಕಂಪನಿಯ ಈ ಕೆಲಸಗಳಲ್ಲಿ ಮುಂಚೂಣಿಯಲ್ಲಿರುವುದರಿಂದ ಪ್ರಮುಖ ಪಾತ್ರವಹಿಸಲು ಸನ್ನದ್ಧವಾಗಿದೆ. ಸರ್ಕಾರವು ನಮ್ಮ ನಿಗಮಕ್ಕೆ ಪಾರದರ್ಶಕ ಕಾಯ್ದೆ ಸೆಕ್ಷನ್ 4(ಜಿ) ಕೆಟಿಟಿಪಿ ನಿಯಮ 1999ರ ಕೆಳಗೆ ರೂ.2.00 ಕೋಟಿಯೊಳಗಿನ ಕಾಮಗಾರಿಗಳಿಗೆ ವಿನಾಯಿತಿ ನೀಡಿದೆ. ಈ ವಿನಾಯಿತಿಯು ದಿನಾಂಕ 31.3.2015 ಕ್ಕೆ ಕೊನೆಗೊಳ್ಳುತ್ತದೆ. ಈ ರಿಯಾಯಿತಿಯನ್ನು ರೂ.5.00 ಕೋಟಿಗಳಿಗೆ ಏರಿಸಿ ಮುಂದಿನ ಮೂರು ವರ್ಷಕ್ಕೆ ವಿಸ್ತರಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುವುದು. ಸರ್ಕಾರವು ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯವನ್ನು ಒದಗಿಸುವ ಸಲುವಾಗಿ ಸಾಕಷ್ಟು ಅನುದಾನವನ್ನು ಹೂಡಿದೆ. ನಮ್ಮ ಕಂಪನಿಯು ಅಂತಹ ಕಾಮಗಾರಿಗಳನ್ನು ಮುಂದಿನ ದಿನಗಳಲ್ಲಿ ಪಡೆಯಲು ಯಾವುದೇ ಸಮಸ್ಯೆಯಿರುವುದಿಲ್ಲ.

## ಇ–ಆಡಳಿತ :–

ಸರ್ಕಾರದಿಂದ ಹೊರಡಿಸಿರುವ ಕೆ.ಟಿ.ಪಿ.ಪಿ ಕಾಯ್ದೆ 1999 ಹಾಗೂ ಮಾಹಿತಿ ಹಕ್ಕು ಕಾಯ್ದೆ 2000 ಅನ್ನು ನಮ್ಮ ಕಂಪನಿಯಲ್ಲಿ ಎಲ್ಲಾ ಹಂತದ ಚಟುವಟಿಕೆಗಳಲ್ಲಿ ಅನುಸರಿಸಲಾಗುತ್ತಿದೆ. ಇದಕ್ಕಾಗಿ ಕಂಪನಿಯು ಎಲ್ಲಾ ಉಪ ವಿಭಾಗ ಮಟ್ಟದಲ್ಲಿ ಗಣಕೀಕರಣಗೊಳಿಸಲಾಗಿದ್ದು, 2010–11ನೇ ಸಾಲಿನಿಂದ ಎಲ್ಲಾ ಲೆಕ್ಕಪತ್ರಗಳನ್ನು Tally Accounting System ನಲ್ಲಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಸಂಸ್ಥೆಯು ಎಚ್‌ಕ್ಯುಆರ್‌ಎಸ್ ನಿಧಿಯಡಿ ಭೂಸಿರಿ ಎಂಬ ತಂತ್ರಾಂಶವನ್ನು ಉಪಯೋಗಿಸುತ್ತಿದೆ. ಈ ತಂತ್ರಾಂಶದಡಿ ಸಂಸ್ಥೆಯು ಯೋಜನೆಗಳ ಆರ್ಥಿಕ, ಭೌತಿಕ ಪ್ರಗತಿ ಹಾಗೂ ಭಾವಚಿತ್ರಗಳನ್ನು ದಾಖಲಿಸಲಾಗುತ್ತದೆ. ಈ ತಂತ್ರಾಂಶದಲ್ಲಿ ಆರ್‌ಟಿಐ ಕಡತದ ವಿವರಗಳು ಲಭ್ಯವಿರುತ್ತದೆ. ಪತ್ರಗಳ ರವಾನೆ ಹಾಗೂ ಇತರೆ ಕಾರ್ಯಗಳನ್ನು ರವಾನೆ ತಂತ್ರಾಂಶದ ಮೂಲಕ ಪ್ರಾಜೆಕ್ಟ್ ಕಛೇರಿಗೆ ಕಳುಹಿಸಲಾಗಿದೆ.

ಇದು ಮಾಹಿತಿಯ ತ್ವರಿತ ರವಾನೆಗೆ ಹಾಗೂ ಮಾನವಶಕ್ತಿ ಹಾಗೂ ಕಾಗದ ಕಾರ್ಯಗಳನ್ನು ಕಡಿಮೆ ಮಾಡಲು ಅನುಕೂಲಕರವಾಗಿದೆ. ಮಾಹಿತಿ ಹಕ್ಕು ಕಾಯ್ದೆಯ ವಿವರಗಳು ಆಸಕ್ತಿಯುಳ್ಳವರಿಗೆ ಆನ್‌ಲೈನ್‌ನಲ್ಲಿ ಲಭ್ಯವಿರುತ್ತದೆ.

## ನೌಕರರ ಶ್ರೇಯೋಭಿವೃದ್ಧಿ :–

ಕೆ.ಆರ್.ಐ.ಡಿ.ಎಲ್. ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಹೆಚ್ಚಿನ ಪರಿಜ್ಞಾನ ಹೊಂದಲು ಅನುಕೂಲವಾಗುವುದಕ್ಕೆ ಹಾಗೂ ಕಟ್ಟಡ ನಿರ್ಮಾಣ ತಂತ್ರಜ್ಞಾನದ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಿ, ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಸಂಸ್ಥೆಯಲ್ಲಿಯೇ ಹಮ್ಮಿಕೊಳ್ಳಲಾಗಿರುತ್ತದೆ ಹಾಗೂ ಇತರೆ ತರಬೇತಿ ಶಿಬಿರಗಳಿಗೆ ಹೊರರಾಜ್ಯದಲ್ಲಿಯೂ ಕೂಡ ನಿಯೋಜಿಸಲಾಗಿರುತ್ತದೆ. ಕಂಪನಿಯು ಮುಂದಿನ ವರ್ಷಗಳಲ್ಲಿ ಉತ್ಸಾಹಿ ನೌಕರರನ್ನು ನೀಡುವ ದೃಷ್ಟಿಯಿಂದ 2010 ರಲ್ಲಿ 10 ಜನ, 2012ರಲ್ಲಿ 31 ಜನ ಇಂಜಿನಿಯರ್‌ಗಳನ್ನು

ನೇಮಿಸಿಕೊಂಡಿದ್ದು, 27.6.2013 ರಂದು ನಡೆದ ಸಂಸ್ಥೆಯ 172 ನೇ ಮಂಡಳಿಯ ಸಭೆಯಲ್ಲಿ 200 ಎಂಜಿನಿಯರ್‌ಗಳನ್ನು ನೇಮಿಸಿಕೊಳ್ಳಲು ಅನುಮತಿ ನೀಡಲಾಗಿದೆ.

### ಇಂಧನ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ :–

ಕಂಪನಿಯು ಮುಖ್ಯವಾಗಿ ನಿರ್ಮಾಣ ವ್ಯವಹಾರದಲ್ಲಿ ತೊಡಗಿರುವುದರಿಂದ ಕಂಪನಿಗಳ (ನಿರ್ದೇಶಕರ ಮಂಡಳಿಯ ವರದಿಯಲ್ಲಿ ವಿವರಗಳ ಪ್ರಕಟಪಡಿಸುವಿಕೆ) ನಿಯಮಗಳು, 1988 ರನ್ವಯ ಇಂಧನ ಸಂರಕ್ಷಣೆಯ ವಿವರಗಳು ಕಂಪನಿಗೆ ಅನ್ವಯಿಸುವುದಿಲ್ಲ.

### ವಿದೇಶಿ ವಿನಿಮಯದ ಗಳಿಕೆ ಮತ್ತು ವೆಚ್ಚ :–

ವರದಿಯ ವರ್ಷದಲ್ಲಿ ವಿದೇಶಿ ವಿನಿಮಯದಿಂದ ಯಾವುದೇ ಗಳಿಕೆ ಮತ್ತು ವೆಚ್ಚವಿರುವುದಿಲ್ಲ.

### ನೌಕರರ ವಿವರಗಳು :–

ಕಂಪನಿಗಳ ಕಾಯ್ದೆ 1956ರ ಅಧಿನಿಯಮ 217 (2ಎ) ಅಡಿಯಲ್ಲಿ ವಿವರಗಳನ್ನು ಸಲ್ಲಿಸಬೇಕಾಗಿರುವ ನೌಕರರು ಯಾರೂ ಇಲ್ಲ.

### ಲೆಕ್ಕ ಪರಿಶೋಧಕರು :–

ಮೆ॥ ಮಲ್ಯ ಅಂಡ್ ಮಲ್ಯ, ಬೆಂಗಳೂರು ಇವರನ್ನು 2013–14ನೇ ಹಣಕಾಸಿನ ವರ್ಷಕ್ಕೆ ಶಾಸನ ಬದ್ದ ಲೆಕ್ಕ ಪರಿಶೋಧಕರೆಂದು ನಿಯಂತ್ರಕರು ಮತ್ತು ಭಾರತದ ಆಡಿಟರ್ ಜನರಲ್‌ರವರು ನೇಮಕ ಮಾಡಿರುತ್ತಾರೆ ಹಾಗೂ ಮೆ॥ ಮಲ್ಯ ಮತ್ತು ಮಲ್ಯ, ಬೆಂಗಳೂರು ಅವರನ್ನು 2014–15ನೇ ಹಣಕಾಸಿನ ವರ್ಷಕ್ಕೆ ಶಾಸನ ಬದ್ದ ಲೆಕ್ಕ ಪರಿಶೋಧಕರೆಂದು ನಿಯಂತ್ರಕರು ಮತ್ತು ಭಾರತದ ಆಡಿಟರ್ ಜನರಲ್‌ರವರು ನೇಮಕ ಮಾಡಿರುತ್ತಾರೆ.

### ಶಾಸನ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ಉತ್ತರ :–

ಶಾಸನ ಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ನೀಡಿರುವ ಉತ್ತರಗಳನ್ನೊಳಗೊಂಡ ಶಾಸನಬದ್ಧ ಲೆಕ್ಕಪರಿಶೋಧಕರ ವರದಿ ತಾರೀಖು 04.12.2014 ಅನ್ನು ಈ ವರದಿಗೆ ಲಗತ್ತಿಸಲಾಗಿದೆ.

### ಭಾರತದ ನಿಯಂತ್ರಕರು ಮತ್ತು ಆಡಿಟರ್ ಜನರಲ್‌ರವರಿಂದ ಲೆಕ್ಕಪತ್ರಗಳ ಪುನರ್ ಪರಿಶೀಲನೆ :–

ಪ್ರಧಾನ ಲೆಕ್ಕಪತ್ರ ಜನರಲ್(ಜಿ&ಎಸ್‌ಎಸ್‌ಎ)ರವರು ನೀಡಿರುವ ನಿರಾಕ್ಷೇಪಣೆಗಳ ಪ್ರಮಾಣ ಪತ್ರವನ್ನು ಲಗತ್ತಿಸಿದೆ.

### ನೌಕರರು :–

ನೌಕರರೊಂದಿಗೆ ಉತ್ತಮ ಸಂಬಂಧ ಹೊಂದಿದ್ದು ಎಲ್ಲ ಹಂತದಲ್ಲಿಯೂ ಕಂಪನಿಯ ನೌಕರರ ನಿಸ್ಪೃಹತೆ, ಕಠಿಣ ಶ್ರಮ ಮತ್ತು ಸಹಕಾರವನ್ನು ನಿರ್ದೇಶಕರು ಶ್ಲಾಘಿಸಿದ್ದಾರೆ.

### ಶಾಸನಗಳ ಪರಿಪಾಲನೆ :–

ಕಂಪನಿಯು, ಕಂಪನಿ ಕಾಯ್ದೆ, 1956, ಕಾರ್ಮಿಕ ಕಾನೂನುಗಳು ಮತ್ತು ಇತರ ಕಾರ್ಪೊರೇಟ್ ಕಾನೂನುಗಳ ಅಡಿಯಲ್ಲಿ ನಿಗದಿಪಡಿಸಿರುವ ವಿವಿಧ ಶಾಸನಗಳ ಅಗತ್ಯತೆಗಳನ್ನು ಪಾಲಿಸಿದೆ.

## ನಿರ್ದೇಶಕರು :-

ಸರ್ಕಾರವು ಪ್ರಸಕ್ತ ವರ್ಷದಲ್ಲಿ ಈ ಕೆಳಕಂಡ ನಿರ್ದೇಶಕರುಗಳನ್ನು ನೇಮಿಸಿರುತ್ತದೆ.

1. ಶ್ರೀ ಟಿ.ಎಂ. ವಿಜಯಭಾಸ್ಕರ್, ಐ.ಎ.ಎಸ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್‌ಡಿ&ಪಿಆರ್ ಇಲಾಖೆ, ಇವರನ್ನು ಕಂಪನಿಯ ನಿರ್ದೇಶಕರಾಗಿ ಮತ್ತು ಅಧ್ಯಕ್ಷರಾಗಿ ದಿನಾಂಕ: 12.06.2013 ರಿಂದ 25.11.2014ರವರೆಗೆ ನೇಮಿಸಲಾಗಿದೆ.
2. ಶ್ರೀ ಶ್ರೀಶೈಲ ಎಂ. ದಳವಾಯಿ ಇವರನ್ನು ಕೆಆರ್‌ಡಿಐಎಲ್‌ವ ಅಧ್ಯಕ್ಷರಾಗಿ ದಿನಾಂಕ: 25.11.2014ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.
3. ಡಾ. ಹೆಚ್. ಭಾಸ್ಕರ್, ಐ.ಎ.ಎಸ್., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ ರಾಜೀವ್ ಚಾವ್ಲಾ, ಐ.ಎ.ಎಸ್., ಅವರ ಬದಲಾಗಿ ದಿನಾಂಕ: 08.10.2013ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.
4. ಶ್ರೀ ಎಂ.ಆರ್. ಕಾಂಬ್ಳೆ, ಐ.ಎ.ಎಸ್., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ ಇ. ವೆಂಕಟಯ್ಯ, ಐ.ಎ.ಎಸ್, ಅವರ ಬದಲಾಗಿ ದಿನಾಂಕ: 17.07.2014 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.
5. ಶ್ರೀ ಹೆಚ್.ಪಿ. ಪ್ರಕಾಶ್, ಐ.ಎಫ್.ಎಸ್., ವ್ಯವಸ್ಥಾಪಕ ನಿರ್ದೇಶಕರು, ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ ಎಚ್.ಜಿ.ಶಿವಾನಂದ ಮೂರ್ತಿ, ಐ.ಎಫ್.ಎಸ್, ಅವರ ಬದಲಾಗಿ ದಿನಾಂಕ : 18.07.2013 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.
6. ಶ್ರೀ ಎಸ್.ಎನ್. ಜಯರಾಮ್, ಐ.ಎ.ಎಸ್., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ ನವೀನ್ ರಾಜ್ ಸಿಂಗ್, ಐ.ಎ.ಎಸ್., ಅವರ ಬದಲಾಗಿ ದಿನಾಂಕ : 08.10.2013 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.
7. ಶ್ರೀ ಜಗನ್ನಾಥ್ ರೆಡ್ಡಿ, ಮುಖ್ಯ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ ಪ್ರಭಾಕರ್ ಹೆಚ್. ಚಿನ್ನಿ, ಕೆ.ಇ.ಎಸ್., ಅವರ ಬದಲಾಗಿ ದಿನಾಂಕ : 08.10.2013 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.
8. ಶ್ರೀ ಬೂವನಹಳ್ಳಿ ನಾಗರಾಜ್, ನಿರ್ದೇಶಕರು (ಸುವರ್ಣ ಗ್ರಾಮ ಯೋಜನೆ ಮತ್ತು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್‌ಡಿ&ಪಿಆರ್ ಇಲಾಖೆ, ಇವರನ್ನು ದಿನಾಂಕ: 17.07.2014ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಶ್ರೀ ಚಿಕ್ಕನಗೌಡರ್ ಸಿದ್ದನಗೌಡರ್, ಅಧ್ಯಕ್ಷರು, ಕೆಆರ್ಐಡಿಎಲ್, ಶ್ರೀ ಎಚ್.ಜಿ.ಶಿವಾನಂದ ಮೂರ್ತಿ, ಐ.ಎಫ್.ಎಸ್, ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್ ಮತ್ತು ಶ್ರೀ ಎಸ್.ಎನ್. ಜಯರಾಂ, ಐ.ಎ.ಎಸ್, ಶ್ರೀ ಟಿ.ಎಂ. ವಿಜಯಭಾಸ್ಕರ್, ಐ.ಎ.ಎಸ್., ಹಾಗೂ ಶ್ರೀ ರಾಜೀವ್ ಚಾವ್ಲಾ, ಐ.ಎ.ಎಸ್., ರವರುಗಳು ನಿರ್ದೇಶಕರಾಗಿ ಪ್ರಸಕ್ತ ವರ್ಷದಲ್ಲಿ ಸೇವೆ ಸಲ್ಲಿಸಿರುವುದನ್ನು ಶ್ಲಾಘಿಸಲಾಗಿದೆ.

## ನಿರ್ದೇಶಕರ ಹೊಣೆಗಾರಿಕೆ :-

1956ರ ಕಂಪನಿಗಳ ಅಧಿನಿಯಮದ 217 (2ಎಎ)ನೇ ಅಧಿನಿಯಮದ ಅಡಿಯಲ್ಲಿನ ಉಪಬಂಧಗಳಿಗೆ ಅನುಗುಣವಾಗಿ ನಿರ್ದೇಶಕರು ಈ ಮುಂದಿನ ಅಂಶಗಳನ್ನು ತಿಳಿಸಿದ್ದಾರೆ:

ಎ) ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಾಗ ಅನ್ವಯವಾಗುವ ಲೆಕ್ಕಪತ್ರದ ಗುಣಮಟ್ಟಗಳನ್ನು ಅನುಸರಿಸಲಾಗಿದೆ ಹಾಗೂ ಪಾಲಿಸುತ್ತಿದ್ದ ನಿಯಮದಲ್ಲಿ ಬದಲಾವಣೆಗಳಾಗಿದ್ದಲ್ಲಿ ಅಗತ್ಯವಾದ ವಿವರಣೆ ಕೊಡಲಾಗಿದೆ.

ಬಿ) ವಾರ್ಷಿಕ ವರ್ಷದ ಕೊನೆಯಲ್ಲಿ ಕಂಪನಿಯ ಸ್ಥಿತಿಗತಿಗಳು ಮತ್ತು ಆ ಅವಧಿಯ ಕಂಪನಿಯ ನಷ್ಟಗಳ ವಾಸ್ತವ ಚಿತ್ರಣವನ್ನು ನೀಡುವ ಸಲುವಾಗಿ ನಿರ್ದೇಶಕರು ಸಮಂಜಸವಾದ ಮತ್ತು ವಿವೇಚನಾಯುಕ್ತವಾದ ಲೆಕ್ಕಪತ್ರ ಕಾರ್ಯನೀತಿಗಳನ್ನು ಆಯ್ದುಕೊಂಡು ಅವುಗಳನ್ನು ನಿರಂತರವಾಗಿ ಅನ್ವಯಿಸಿ ನಿರ್ಣಯಗಳನ್ನು ಮತ್ತು ಅಂದಾಜುಗಳನ್ನು ಕೈಗೊಂಡಿದ್ದಾರೆ.

ಸಿ) ಕಂಪನಿಯ ಆಸ್ತಿಗಳನ್ನು ರಕ್ಷಿಸುವ ಮತ್ತು ಮೋಸ ಮತ್ತು ಇತರ ಅಕ್ರಮಗಳನ್ನು ನಿವಾರಿಸುವ ಮತ್ತು ಪತ್ತೆಹಚ್ಚುವ ಸಲುವಾಗಿ 1956ರ ಕಂಪನಿಗಳ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಲೆಕ್ಕಪತ್ರಗಳ ದಾಖಲೆಗಳನ್ನು ನಿರ್ವಹಿಸುವ ಬಗ್ಗೆ ಸೂಕ್ತ ಮತ್ತು ಸಾಕಷ್ಟು ಜಾಗರೂಕತೆಯನ್ನು ವಹಿಸಲಾಗಿದೆ.

ಡಿ) ಚಾಲ್ತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದೆ.

## ಕೃತಜ್ಞತೆಗಳು :-

ನಿರ್ದೇಶಕರುಗಳು ಭಾರತ ಸರ್ಕಾರಕ್ಕೆ, ಕರ್ನಾಟಕ ಸರ್ಕಾರಕ್ಕೆ, ಸರ್ಕಾರದ ಇಲಾಖೆಗಳಿಗೆ, ಮಾನ್ಯ ಶಾಸಕರುಗಳಿಗೆ, ಶಾಸಕಾಂಗ ಸಮಿತಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ, ಹಣಕಾಸು ಇಲಾಖೆಗೆ, ಜಿಲ್ಲಾ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳಿಗೆ ತಾವು ನೀಡಿದ ಸಹಕಾರ, ಮಾರ್ಗದರ್ಶನ ಮತ್ತು ಬೆಂಬಲಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ಈ ರೀತಿಯ ಸಹಕಾರ ಮತ್ತು ಬೆಂಬಲ ಇಲ್ಲದಿದ್ದಲ್ಲಿ ಪ್ರಸಕ್ತ ವರ್ಷದಲ್ಲಿನ ಪ್ರಗತಿ ಮಾಡಲಾಗುತ್ತಿರಲಿಲ್ಲವೆಂದು ತಿಳಿಸಿದ್ದಾರೆ. ಪ್ರಸಕ್ತ ವರ್ಷದಲ್ಲಿ ಗ್ರಾಹಕರು, ಬ್ಯಾಂಕಿನವರು, ಸಲಹೆಗಾರರು, ಶಾಸನಬದ್ಧ ಲೆಕ್ಕ ಪರಿಶೋಧಕರು, ಆಂತರಿಕ ಲೆಕ್ಕ ಪರಿಶೋಧಕರು ಮತ್ತು ಅಕೌಂಟೆಂಟ್ ಜನರಲ್ ಲೆಕ್ಕ ಪರಿಶೋಧಕರು ಮತ್ತು ನೌಕರರು ನಿಗಮಕ್ಕೆ ತಮ್ಮ ಅಮೂಲ್ಯವಾದ ಬೆಂಬಲ ಹಾಗೂ ಸಹಕಾರ ನೀಡಿರುವುದಕ್ಕೆ ಪ್ರಶಂಶಿಸಲಾಗಿದೆ. ಮುಂಬರುವ ವರ್ಷಗಳಲ್ಲಿ ಸಹ ಇದೇ ರೀತಿ ಬೆಂಬಲವನ್ನು ನಿರೀಕ್ಷಿಸಲಾಗುವುದೆಂದು ತಿಳಿಸಿದರು. ನಿರ್ದೇಶಕರು ಷೇರುದಾರರಾದ ಕರ್ನಾಟಕ ಸರ್ಕಾರಕ್ಕೆ ತಮ್ಮ ಧನ್ಯವಾದಗಳನ್ನು ತಿಳಿಸಿರುತ್ತಾರೆ.

ಮಂಡಳಿಯ ಪರವಾಗಿ,

ಸಹಿ/-
**(ಹೆಚ್.ಪಿ. ಪ್ರಕಾಶ್, ಭಾ.ಅ.ಸೇ.)**
ವ್ಯವಸ್ಥಾಪಕ ನಿರ್ದೇಶಕರು
ಕೆಆರ್‌ಐಡಿಎಲ್

ಸಹಿ/-
**(ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು
ಕೆಆರ್‌ಐಡಿಎಲ್

ಸ್ಥಳ : ಬೆಂಗಳೂರು
ದಿನಾಂಕ : 20.12.2014

## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇದರ 31ನೇ ಮಾರ್ಚ್ 2014ಕ್ಕೆ ಅಂತ್ಯಗೊಂಡ ವರ್ಷದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 1956 619(4)ನೇ ಪ್ರಕರಣದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಮಾಡಿರುವ ಟೀಕೆ ಟಿಪ್ಪಣಿಗಳು.

ಕಂಪನಿಗಳ ಅಧಿನಿಯಮ, 1956ರ ಮೇರೆಗೆ ನಿಯಮಿಸಿರುವ ಹಣಕಾಸು ವರದಿಯ ಚೌಕಟ್ಟಿಗೆ ಅನುಗುಣವಾಗಿ **2014 ರ ಮಾರ್ಚ್ 31ಕ್ಕೆ** ಕೊನೆಗೊಳ್ಳುವ **ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು** ಇದರ ಹಣಕಾಸಿನ ವಿವರಪಟ್ಟಿಗಳನ್ನು ಸಿದ್ಧಪಡಿಸುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮ, 1956ರ 619 (2)ನೇ ಪ್ರಕರಣದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರು, ಅವರ ವೃತ್ತಿಸಂಸ್ಥೆಯಾದ ಭಾರತದ ಚಾರ್ಟರ್ಡ್ ಅಕೌಂಟೆಂಟರು ಗೊತ್ತುಪಡಿಸಿರುವ ಲೆಕ್ಕಪರಿಶೋಧನೆ ಮತ್ತು ಖಾತ್ರಿ ಮಾನಕಗಳಿಗೆ ಅನುಸಾರವಾಗಿ ಸ್ವತಂತ್ರ ಲೆಕ್ಕಪರಿಶೋಧನೆಯನ್ನು ಆಧರಿಸಿ ಕಂಪನಿಗಳ ಅಧಿನಿಯಮ, 1956ರ 227ನೇ ಪ್ರಕರಣದ ಮೇರೆಗೆ ಈ ಹಣಕಾಸಿನ ವಿವರಪಟ್ಟಿಗಳನ್ನು ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸಲು ಜವಾಬ್ದಾರರಾಗಿದ್ದಾರೆ. ಇದನ್ನು ಅವರು ನಿರ್ವಹಿಸಿದ್ದಾರೆಂದು ತಿಳಿಸಲಾಗಿದೆ. ದಿನಾಂಕ **04.12.2014 ರಂದು** ಅವರು ನೀಡಿದ ಲೆಕ್ಕ ಪರಿಶೋಧನಾ ವರದಿಯ ಮೂಲಕ ಪೂರ್ಣಗೊಳಿಸಲಾಗಿದೆ.

ನಾನು ಭಾರತದ ಮಹಾಲೇಖಪಾಲರು ಮತ್ತು ಲೆಕ್ಕಪರಿಶೋಧಕರ ಪರವಾಗಿ,1956ರ ಕಂಪನಿಗಳ ಕಾಯಿದೆ 619(3)(ಬಿ)ರ ಅನ್ವಯ 31ನೇ ಮಾರ್ಚ್ 2014ಕ್ಕೆ ಕೊನೆಗೊಂಡ ವರ್ಷದ ಬಗ್ಗೆ **'ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು'** ಇದರ ಹಣಕಾಸಿನ ವಿವರಪಟ್ಟಿಗಳನ್ನು ಇದರ ಆರ್ಥಿಕ ವಿವರದ ತಂಖ್ತೆ ಬಗ್ಗೆ ಪೂರಕ ಲೆಕ್ಕ ಪರಿಶೋಧನೆ ನಡೆಸಿದ್ದೇನೆ. ಸದರಿ ಪೂರಕ ಲೆಕ್ಕ ಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯಚರಣೆ ಕಾಗದ ಪತ್ರಗಳನ್ನು ಪರಾಮರ್ಷೆ ಮಾಡದೆ ಸ್ವತಂತ್ರವಾಗಿ ಮಾಡಲಾಗಿದೆ. ಈ ನನ್ನ ಕಾರ್ಯವು ಶಾಸನಬದ್ಧ ಲೆಕ್ಕ ಪರಿಶೋಧಕರ ವಿಚಾರಣೆಗಳಿಗೆ ಮತ್ತು ಕಂಪನಿಯ ಸಿಬ್ಬಂದಿಯ ವಿಚಾರಣೆಗಳಿಗೆ ಹಾಗೂ ಕೆಲವು ಲೆಕ್ಕಪತ್ರದ ದಾಖಲೆಗಳ ಆಯ್ದ ಪರಿಶೀಲನೆಗೆ ಪ್ರಮುಖವಾಗಿ ಸೀಮಿತವಾಗಿದೆ. 1956ರ ಕಂಪನಿಗಳ ಕಾಯಿದೆ 619(4)ರ ಅನ್ವಯ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಬಗ್ಗೆ ಅಥವಾ ಇದರ ಪೂರಕ ವರದಿಯ ಬಗ್ಗೆ ಯಾವುದೇ ಟೀಕೆ, ಟಿಪ್ಪಣಿ ಮಾಡಬೇಕಾದ ಅಗತ್ಯ ನನಗೆ ಕಂಡು ಬಂದಿಲ್ಲ.

### ಲೆಕ್ಕದ ಬಗ್ಗೆ ಪ್ರತಿಕ್ರಿಯೆಗಳು

#### ಎ. ಲೆಕ್ಕದ ಲಾಭ ಮತ್ತು ನಷ್ಟ

ಬಡ್ಡಿಯ ಆದಾಯ ರೂ.26.74 ಕೋಟಿ ರೂಗಳನ್ನು ಸೇರಿಸಲಾಗಿಲ್ಲ. ಉದ್ಯೋಗಿಗಳ ಸೌಲಭ್ಯಗಳಿಗೆ ಸಂಬಂಧಪಟ್ಟಂತೆ ಆದಾಯದ ಬಡ್ಡಿಯನ್ನು ಬಳಸಲಾಗಿದ್ದು, ಅದನ್ನು ಆದಾಯ ಮತ್ತು ಉದ್ಯೋಗಿಗಳ ಸೌಲಭ್ಯಗಳ ಲೆಕ್ಕಪತ್ರದಲ್ಲಿ ತಿಳಿಸಲಾಗಿದೆ.

**ಬಿ. ಸಾಮಾನ್ಯ:**

ಎ) ಕಂಪನಿಯು ಖಾತೆಯ ಪುಸ್ತಕಗಳಲ್ಲಿ ಬಿಬಿಎಂಪಿ ಪರವಾಗಿ ಕಾರ್ಯಗತಗೊಳಿಸಿದ 0.56 ಕೋಟಿ ರೂ.ಗಳ ಕೆಲಸವನ್ನು ಗುರುತಿಸಿಲ್ಲ. ಬಡ್ಡಿಯ ಆದಾಯವನ್ನು ಉದ್ಯೋಗಿಗಳ ಸೌಲಭ್ಯಕ್ಕಾಗಿ ನೀಡುತ್ತಿರುವುದರಿಂದ ಆದಾಯ ಕಡಿಮೆಯಾಗಿ, ಉದ್ಯೋಗಿಗಳು ಸೌಲಭ್ಯ ಪಡೆಯುವಂತಾಗಿದೆ.

ಬಿ) ಕಂಪನಿಯು ಗುರುತಿಸಿದ ಆದಾಯದ ಪೂರ್ಣಗೊಂಡ ಶೇಕಡಾವಾರನ್ನು ಸೇರಿಸಿದೆ. ನಿಜವಾದ ವೆಚ್ಚ ಮತ್ತು ಅಂದಾಜು ಮೊತ್ತಗಳು ಎಎಸ್-7 ರೂಪಿಸುವುದಕ್ಕಾಗಿ, ಆದಾಯದ ಕಡಿಮೆಯಾಗುವುದಕ್ಕೆ ವೆಚ್ಚವಾಗುತ್ತಿರುವ ಬಿಲ್ಲುಗಳು ಹಾಗೂ ಅಂದಾಜು ವೆಚ್ಚಗಳ ಅನುಪಾತಗಳ ನಡುವೆ ಅಳವಡಿಸಿಕೊಳ್ಳಲಾಗುತ್ತದೆ. ಆದಾಯದ ಪರಿಣಾಮವನ್ನು ಅಳೆಯಲಾಗುವುದಿಲ್ಲ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ
ಸಹಿ/-
**(ಎಲ್. ಅಂಗಮ್ ಚಾಂದ್ ಸಿಂಗ್)**
ಪ್ರಧಾನ ಮಹಾಲೇಖಪಾಲರು
(ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು.

ಸ್ಥಳ : ಬೆಂಗಳೂರು
ದಿನಾಂಕ : 09ನೇ ಮಾರ್ಚ್ 2015

## 31.3.2014ಕ್ಕೆ ಕೊನೆಯಾಗುವ ವರ್ಷದ ಕೆಆರ್‌ಐಡಿಎಲ್ ಸಂಸ್ಥೆಯ ಲೆಕ್ಕಪತ್ರಗಳ ಬಗ್ಗೆ ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ

| ಕ್ರ.ಸ | ಆಕ್ಷೇಪಣೆಗಳು | ಆಡಳಿತ ಮಂಡಳಿಯ ಉತ್ತರಗಳು |
|---|---|---|
| 1 | ಬ್ಯಾಲೆನ್ಸ್ ಶೀಟ್‌ನ ಆಸ್ತಿ ವಿಭಾಗದಲ್ಲಿ 'ಪ್ರಗತಿಯಲ್ಲಿರುವ ಕೆಲಸ'ವನ್ನು 29,89,52,33,053 ರೂ.ಎಂದು ತೋರಿಸಲಾಗಿದೆ. ಸಂಬಂಧಿಸಿದ ಏಜೆನ್ಸಿಗಳಿಂದ ಸ್ವೀಕರಿಸಿದ ಮುಂಗಡ 36,90,62,29,222 ರೂ, ಎನ್ನಲಾಗಿದೆ.ಬ್ಯಾಲೆನ್ಸ್ ಶೀಟ್‌ನ ಸಾಲ ಲೆಕ್ಕದಡಿ ಮುಂಗಡ ಮತ್ತು ಸಾಲಗಳನ್ನು ತೋರಿಸಲಾಗಿದೆ. ಅಂತಿಮ ಬಿಲ್‌ನ ಹೊಂದಾಣಿಕೆ ಆಗದ ಕಾರಣ ಮೇಲಿನ ಎರಡೂ ಮೊತ್ತವನ್ನು ಒಟ್ಟಾಗಿಸಲಾಗಿದೆ.' ಪ್ರಗತಿಯಲ್ಲಿರುವ ಕೆಲಸ' ಮತ್ತು ಏಜೆನ್ಸಿಗಳಿಂದ ಸಂಗ್ರಹಿಸಿದ ಮುಂಗಡ ವಾಸ್ತವಕ್ಕಿಂತ ಹೆಚ್ಚು ಇದ್ದು, ಎಷ್ಟು ಹೆಚ್ಚು ಎಂಬುದು ವಿವರ ನೀಡದ ಕಾರಣ ಲೆಕ್ಕಿಸಲು ಸಾಧ್ಯವಾಗಿಲ್ಲ. | 2013-14ರ ಸಾಲಿನಲ್ಲಿ 271.88 ಕೋಟಿ ರೂ.ಅಂತಿಮ ಬಿಲ್ ಹೊಂದಾಣಿಕೆ ಮಾಡಲಾಗಿದೆ. ಉಳಿದ ಅಂತಿಮ ಬಿಲ್ ಮೊತ್ತ 991.06 ಕೋಟಿ ರೂ. ಇನ್ನೂ ಹೊಂದಾಣಿಕೆ ಮಾಡಬೇಕಿದೆ. ಕೇಂದ್ರ ಕಚೇರಿಯಲ್ಲಿ ಎಕ್ಸಿಕ್ಯೂಟಿವ್ ಎಂಜಿನಿಯರ್ ನೇತೃತ್ವದಲ್ಲಿ 4 ಎಂಜಿನಿಯರ್‌ಗಳ ಪ್ರತ್ಯೇಕ ಅಂತಿಮ ಬಿಲ್ ತಂಡ ರಚಿಸಿದ್ದು,ತಂಡವು ಎಲ್ಲ ವಿಭಾಗಗಳಿಗೆ ಭೇಟಿ ನೀಡಿ ಉಳಿದ ಬಿಲ್‌ಗಳನ್ನು ಪಡೆದುಕೊಳ್ಳಲು ಪಡೆದುಕೊಳ್ಳಲು ಯತ್ನಿಸುತ್ತಿದೆ. ಇದರಲ್ಲಿ ಕಳೆ ವರ್ಷದ ಬಿಲ್‌ಗಳು ಮತ್ತು 2014-15ರಲ್ಲಿ ಅಂತ್ಯಗೊಳ್ಳುವ ಕೆಲಸಗಳ ಬಿಲ್‌ಗಳನ್ನೂ ಸಂಗ್ರಹಿಸಲಿದೆ. 2014-15ನೇ ಸಾಲಿನಲ್ಲಿ ಕನಿಷ್ಠ 2000 ಕೋಟಿ ರೂ. ಮೊತ್ತದ ಬಿಲ್‌ಗಳನ್ನು ಸಂಗ್ರಹಿಸುವ ನಿರೀಕ್ಷೆ ಇದೆ. |
| 2 | ಟಿಪ್ಪಣಿ 1(3) ನಿಗದಿತ ಠೇವಣಿಗಳಡಿ ಕಂಪನಿಯ ಲೆಕ್ಕಪತ್ರ ಪಾಲಿಸಿಯಂತೆ ನಿಗದಿತ ಠೇವಣಿಗಳ ಮೌಲ್ಯವನ್ನು ವೆಚ್ಚರಹಿತ ಸವಕಳಿ ಮತ್ತು ಜೋಡಿಸಲಾಗದ ನಷ್ಟ ಎಂದು ಗುರುತಿಸಲಾಗುತ್ತಿದೆ. ಆದರೆ,ಲೆಕ್ಕಪತ್ರ ಮಾನದಂಡ 28 "ಇಂಪೇರ್‌ಮೆಂಟ್ ಆಫ್ ಅಸೆಟ್ಸ್' ಪ್ರಕಾರ, ಕಂಪನಿಯು ಇಂಪೇರ್‌ಮೆಂಟ್ ನಷ್ಟವನ್ನು ಪರಿಗಣಿಸಬೇಕು ಮತ್ತು ಅದಕ್ಕೆ ಹಣ ಹೊಂದಿಸಬೇಕು. ಆದರೆ, ಕಂಪನಿಯು ಆಸ್ತಿಗಳ ಇಂಪೇರ್‌ಮೆಂಟ್‌ಅನ್ನು ಲೆಕ್ಕಿಸಿಲ್ಲ. ಹೀಗಾಗಿ ನಾವು 31.3.2014ರ ಬ್ಯಾಲೆನ್ಸ್ ಶೀಟ್‌ನಲ್ಲಿ ಉಲ್ಲೇಖಿಸಿದ ನಿಗದಿತ ಆಸ್ತಿಗಳ ಮೌಲ್ಯದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಾಗಿಲ್ಲ. | ಕಂಪನಿಯು ವಾರ್ಷಿಕ ದಾಸ್ತಾನು ಪರಿಶೀಲನೆ ಕಾರ್ಯನೀತಿಯನ್ನು ರೂಪಿಸಿದ್ದು, ಇದರಲ್ಲಿ ನಿಗದಿತ ಆಸ್ತಿಯೂ ಸೇರ್ಪಡೆ ಗೊಂಡಿರುತ್ತದೆ. ವಾಪಸಾಗದ ಮತ್ತು ಸುಸ್ಥಿತಿಯಲ್ಲಿ ಇಲ್ಲದ ಆಸ್ತಿಗಳನ್ನು ಗುರುತಿಸಿದ್ದು,ಇವನ್ನು ಲೆಕ್ಕ ಪುಸ್ತಕದಲ್ಲಿ ವಜಾ ಮಾಡಲಾಗುತ್ತದೆ.ಈ ವರ್ಷ ಕಂಪನಿ ಇಂಥ ಯಾವುದೇ ಆಸ್ತಿಯನ್ನು ಗುರುತಿಸಿಲ್ಲ.ಹೀಗಾಗಿ ಈ ವರ್ಷ ಆ ಲೆಕ್ಕದಡಿ ವಜಾ ಮಾಡುವುದಿಲ್ಲ. |
| 3 | ಕಂಪನಿ ವಿರುದ್ಧ 41 ದಾವೆ ದಾಖಲಿಸಿದ್ದು, ನಾನಾ ನ್ಯಾಯಾಲಯಗಳಲ್ಲಿ ಅವು ವಿಚಾರಣೆ ಹಂತದಲ್ಲಿವೆ. ವಿಚಾರಣೆ ಮುಗಿಯಬೇಕಾದ ಈ ದಾವೆಗಳಿಂದ ಕಂಪನಿಗೆ ಆಗಬಹುದಾದ ವೆಚ್ಚವನ್ನು ಅಂದಾಜು ಮಾಡಿಲ್ಲ. ಲೆಕ್ಕಪತ್ರ ಮಾನದಂಡ 29 'ಪ್ರಾವಿಷನ್ಸ್, ಕಂಟಿಂಜೆಂಟ್ ಲಿಯಬಿಲೀಟೀಸ್ ಮತ್ತು ಕಂಟಿಂಜೆಂಟ್ ಅಸೆಟ್ಸ್' ಅನ್ವಯ ಕಂಪನಿ ಡಿಸ್‌ಕ್ಲೋಸರ್ ನಿಯಮವನ್ನು ಸಂಸ್ಥೆ ಪಾಲಿಸಿಲ್ಲ.ವಿವರ ಲಭ್ಯವಿಲ್ಲದ ಹಿನ್ನೆಲೆಯಲ್ಲಿ ಇದರ ಮೊತ್ತವನ್ನು ನಾವು ಲೆಕ್ಕಿಸಿಲ್ಲ. | ಬಹುತೇಕ ದಾವೆಗಳನ್ನು ಕಂಪನಿ ಉದ್ಯೋಗಿಗಳು ಸೇವಾ ವಿಷಯಕ್ಕೆ ಸಂಬಂಧಿಸಿದಂತೆ ದಾಖಲಿಸಿದ್ದಾರೆ. ಈ ಪ್ರಕರಣಗಳು ಕೋರ್ಟ್‌ನಲ್ಲಿ ತೀರ್ಮಾನವಾಗದೆ,ಕಂಪನಿ ಮೇಲೆ ಬೀಳಬಹುದಾದ ಆರ್ಥಿಕ ಹೊರೆಯನ್ನು ಪರಿಗಣಿಸಲಾಗದು. ಕಂಪನಿಯ ಒಟ್ಟು ಬಹಿವಾಟನ್ನು ಪರಿಗಣಿಸಿದರೆ, ಈ ದಾವೆಗಳಿಂದ ಆಗಬಹುದಾದ ವೆಚ್ಚ ನಗಣ್ಯ ಎನ್ನಬಹುದು. ಹೀಗಿದ್ದರೂ, ಮುಂದಿನ ವರ್ಷ ಈ ತಖ್ತೆಯಲ್ಲಿ ಬರಬಹುದಾದ ವೆಚ್ಚವನ್ನು ಲೆಕ್ಕಪತ್ರ ಮಾನದಂಡ 29ರಂತೆ ಪರಿಗಣಿಸಿ, ಅದನ್ನು ತೋರಿಸಲಾಗುವುದು. |
| 4 | ಟಿಪ್ಪಣಿ ಸಂಖ್ಯೆ 1(8)(28) ಕಂಪನಿಯು "ವರ್ಕ್ ಇನ್ ಪ್ರೋಗ್ರೆಸ್"ಗೆ ಸಲ್ಲಿಕೆಯಾಗಬೇಕಾದ ವ್ಯಾಟ್‌ನ್ನು ವ್ಯಾಟ್ ರಿಟರ್ನ್‌ನಲ್ಲಿ ತೋರಿಸಿಲ್ಲ. ಈ ಮೊತ್ತದಿಂದ ಲಾಭ ಮತ್ತು ನಷ್ಟದ ಮೇಲೆ ಬೀರಬಹುದಾದ ಪರಿಣಾಮ ಮತ್ತು ಬ್ಯಾಲೆನ್ಸ್ ಶೀಟ್ ಮೇಲೆ ಆಗಬಹುದಾದ ಪರಿಣಾಮವನ್ನು ಲೆಕ್ಕ ಹಾಕಿಲ್ಲ. | ಫಾರ್ಮ್ 240ರಲ್ಲಿ ವಾರ್ಷಿಕ ವ್ಯಾಟ್ ರಿಟರ್ನ್ ಸಲ್ಲಿಸಲು ವ್ಯಾಟ್ ಪ್ರಾಧಿಕಾರ 31.12.2014ರವರೆಗೆ ಕಾಲಾವಕಾಶ ನೀಡಿದೆ. ಅಷ್ಟರಲ್ಲಿ ಕೆಲ ಯೋಜನೆಗಳು ಪೂರ್ಣಗೊಂಡಿದ್ದರೂ, ಫಾರ್ಮ್ 240ನ್ನು ಸಲ್ಲಿಸಿರಲಿಲ್ಲ. ವಾರ್ಷಿಕ ವ್ಯಾಟ್ ಸಲ್ಲಿಕೆಯು ವ್ಯಾಟ್ ಪ್ರಾಧಿಕಾರದ ಜತೆ ಸಂಧಾನದ ಬಳಿಕ ನಿರ್ಧರಿತವಾಗುತ್ತದೆ.ಇದರಿಂದಾಗಿ ವ್ಯತ್ಯಾಸ |

| ಕ್ರ.ಸ | ಆಕ್ಷೇಪಣೆಗಳು | ಆಡಳಿತ ಮಂಡಳಿಯ ಉತ್ತರಗಳು |
|---|---|---|
| | | ಎಷ್ಟಿರಲಿದೆ ಎಂಬುದು ಗೊತ್ತಾಗುವುದಿಲ್ಲ. ಸಂಧಾನದ ಬಳಿಕ ವ್ಯತ್ಯಾಸ ಎಷ್ಟು ಇದೆ ಎಂಬುದು ತಿಳಿದ ಬಳಿಕ ಮುಂದಿನ ವರ್ಷದಿಂದ ಲೆಕ್ಕಿಸಲಾಗುವುದು. |
| 5 | ಟಿಪ್ಪಣಿ 1, ಪಾಯಿಂಟ್ ಸಂಖ್ಯೆ 30ರಲ್ಲಿ ಕಂಡುಬಂದಂತೆ ಜಬಲ್‌ಪುರ ಯೋಜನೆಗೆ 201.29 ಲಕ್ಷ ರೂ. ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಸಹ ಗುತ್ತಿಗೆದಾರರಿಗೆ ನೀಡಿದ 500.51 ಲಕ್ಷ ರೂ.ಪತ್ತೆ ಹಚ್ಚಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ,ಆದರೆ,ಈ ಮೊತ್ತವನ್ನು ಕಂಪನಿಗೆ ಆದ ನಷ್ಟ ಎಂದು ಲೆಕ್ಕದ ಪುಸ್ತಕದಲ್ಲಿ ತೋರಿಸಿಲ್ಲ.ಇದರಿಂದ ಇಎಂಡಿ ಮತ್ತು ಮುಂಗಡವನ್ನು ಅಧಿಕ ಮತ್ತು ವೆಚ್ಚವನ್ನು ಕಡಿಮೆ ತೋರಿಸಿದ್ದು, ಈ ಮೊತ್ತ 712.8 ಲಕ್ಷ ರೂ.ಇದೆ. | ನರ್ಮದಾ ಕಣಿವೆ ಅಭಿವೃದ್ಧಿ ಪ್ರಾಧಿಕಾರ ಕೆಲಸವನ್ನು ನಿಗದಿತ ಅವಧಿಯೊಳಗೆ ಮುಗಿಸದ ಕಾರಣ ಇಎಂಡಿ/ಎಫ್‌ಎಸ್‌ಡಿ ಮೊತ್ತ 201.29 ಲಕ್ಷ ರೂ.ಮುಟ್ಟುಗೋಲು ಹಾಕಿಕೊಂಡಿದೆ. ಎನ್‌ವಿಡಿಎ ಅಧಿಕಾರಿಗಳು ಈ ಸಂಬಂಧ ಬಿಲ್‌ಗಳನ್ನೂ ಸಲ್ಲಿಸಿಲ್ಲ. ಭೋಪಾಲದ ಮಧ್ಯಪ್ರದೇಶದ ಆರ್‌ಬಿಟ್ರೇಷನ್ ನ್ಯಾಯಾಧಿಕರಣದ ಗಮನಕ್ಕೆ ಈ ವಿಷಯ ತರಲಾಗಿದೆ. ನ್ಯಾಯಾಧೀಕರಣದ ತೀರ್ಪಿನ ಬಳಿಕ ಕೆಲಸದಿಂದ ಬರಬಹುದಾದ ಆದಾಯ ಮತ್ತು ಮುಂಗಡದ ಹೊಂದಾಣಿಕೆಯನ್ನು ಲೆಕ್ಕ ಪುಸ್ತಕದಲ್ಲಿ ಮಾಡಲಾಗುವುದು, |
| 6 | ಟಿಪ್ಪಣಿ 1, ಪಾಯಿಂಟ್ ಸಂಖ್ಯೆ 32ರಲ್ಲಿ ಕಂಪನಿ 31.3.2014ರಲ್ಲಿ ಇನ್ವೆಂಟರಿ ಕೊರತೆ ಬಾಬ್ತಿನಲ್ಲಿ ಉದ್ಯೋಗಿಗಳಿಂದ 100.24 ಲಕ್ಷ ರೂ.ಗಳನ್ನು ಸಂಗ್ರಹಿಸಿದೆ. ಈ ಮೊತ್ತವನ್ನು ಆದಾಯ ಎಂದು ಪರಿಗಣಿಸಿಲ್ಲ, ಆಯಾ ವರ್ಷಗಳಲ್ಲಿ ಈ ಮೊತ್ತವನ್ನು ವಜಾ ಮಾಡಿದ್ದರೂ ಕೂಡ. ಇದರಿಂದ ಆರ್ಥಿಕ ಹೊರೆಯನ್ನು ಹೆಚ್ಚು ಮತ್ತು ಆದಾಯ ಕಡಿಮೆಯಾಗಿ ತೋರಿಸಿದಂತಾಗಿದೆ. | ದಾಸ್ತಾನಿನ ಕೊರತೆ, ಹೆಚ್ಚುವರಿ ಕ್ಲೇಮ್‌ಗಳು, ಕೆಲಸ ಮುಗಿಸುವಲ್ಲಿ ತಡವಾಗಿದ್ದರಿಂದ್ದ ನಷ್ಟ ಮತ್ತಿತರ ಕಾರಣಗಳಿಂದ ಇನ್ವೆಂಟರಿ ಕೊರತೆ ಆಗಿದೆ. ಆದರೆ, ಕೆಲ ಉದ್ಯೋಗಿಗಳು ರಿಕವರಿ ಆದೇಶದ ವಿರುದ್ಧ ಕೋರ್ಟ್ ಮೆಟ್ಟಿಲೇರಿದ್ದಾರೆ. ಆದ್ದರಿಂದ ರಿಕವರಿ ಮೊತ್ತವನ್ನು ಆದಾಯ ಎಂದು ತೋರಿಸಿಲ್ಲ. ಆದರೆ, ಭವಿಷ್ಯದಲ್ಲಿ ರಿಕವರಿ ಮೊತ್ತವನ್ನು ಆದಾಯ ಎಂದು ತೋರಿಸಲಾಗುವುದು. ಒಂದು ವೇಳೆ ಈ ಮೊತ್ತದ ವಿರುದ್ಧ ಕ್ಲೇಮ್‌ಗಳು ಬಂದಲ್ಲಿ ಹಾಲಿ ವರ್ಷದಲ್ಲಿ ಆ ಮೊತ್ತವನ್ನು ಖರ್ಚು ಎಂದು ಪರಿಗಣಿಸಲಾಗುವುದು. |

**ಸಹಿ/–**
**(ಹೆಚ್.ಪಿ. ಪ್ರಕಾಶ್, ಭಾ.ಅ.ಸೇ.,)**
ವ್ಯವಸ್ಥಾಪಕ ನಿರ್ದೇಶಕರು
ಕೆಆರ್‌ಐಡಿಎಲ್, ಬೆಂಗಳೂರು.

# ಲೆಕ್ಕಪರಿಶೋಧಕರ ವರದಿ

**ಕರ್ನಾಟಕ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಯಮಿತದ ಸದಸ್ಯರ ಗಮನಕ್ಕೆ**

## ಹಣಕಾಸು ಕುರಿತ ವರದಿ:

ನಾವು ಕರ್ನಾಟಕ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಯಮಿತ (ಇಲ್ಲಿಂದ ಕಂಪನಿ ಎಂದು ಕರೆಯಲ್ಪಡುತ್ತದೆ)ದ 31ನೇ ಮಾರ್ಚ್ 2013ರ ಬ್ಯಾಲೆನ್ಸ್ ಶೀಟ್, ಆದಾಯ ಮತ್ತು ವೆಚ್ಚದ ಲೆಕ್ಕ ಹಾಗೂ ಹಣದ ಹರಿವು ಕುರಿತ ಲೆಕ್ಕವನ್ನು ಪರಿಶೀಲಿಸಿದ್ದೇವೆ. ಜತೆಗೆ, ಲೆಕ್ಕ ಪತ್ರದ ಕಾರ್ಯನೀತಿ ಮತ್ತು ಇತರ ವಿವರಣೆಗಳ ತಾತ್ಪರ್ಯವನ್ನು ಪರಿಗಣಿಸಿದ್ದೇವೆ.

## ಹಣಕಾಸು ಹೇಳಿಕೆ ಕುರಿತು ಸಂಸ್ಥೆಯ ಜವಾಬ್ದಾರಿ:

ಈ ಹಣಕಾಸು ವರದಿಯು 1956ರ ಕಂಪನಿ ಕಾಯಿದೆಯ ಉಪ ವಿಭಾಗ(3ಸಿ), ವಿಭಾಗ 211ಕ್ಕೆ ಅನುಗುಣವಾಗಿ ಕಂಪನಿ ನೀಡಿದ ವಾಸ್ತವ ಮತ್ತು ಸಮತೋಲನದ ಲೆಕ್ಕ ಪತ್ರ ಹೇಳಿಕೆಗಳನ್ನು ಆಧರಿಸಿದೆ. 1956ರ ಕಂಪನಿಗಳ ಕಾಯ್ದೆ(ಕಾಯ್ದೆ) ಜತೆಗೆ ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯದ 2013ರ ಕಂಪನಿಗಳ ಕಾಯ್ದೆಯ 133ನೇ ಸೆಕ್ಷನ್ ಅನ್ವಯ 13ನೇ ಸೆಪ್ಟೆಂಬರ್ 2013ರ ಸಾಮಾನ್ಯ ನೋಟಿಸ್ ಮತ್ತು ಭಾರತ ದೇಶದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ಪತ್ರ ತತ್ವಗಳಿಗೆ ಅನುಗುಣವಾಗಿ ಪರಿಗಣಿಸಬೇಕಿದೆ.ಆದರೆ,ಕಂಪನಿಗಳ ಅಂತರ್ ನಿಯಂತ್ರಣದ ಕ್ಷಮತೆ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಉದ್ದೇಶದಿಂದಲ್ಲ. ಕಂಪನಿ ನೀಡಿದ ಲೆಕ್ಕಪತ್ರ ನ್ಯಾಯಬದ್ಧವಾಗಿದೆ ಹಾಗೂ ಯಾವುದೇ ದೋಷ ಒಳಗೊಂಡಿಲ್ಲ ಎಂದು ನಾವು ನಂಬಿದ್ದೇವೆ. ಅಂಥ ಲೋಪಕ್ಕೆ ನಾವು ಹೊಣೆಗಾರರಾಗುವುದಿಲ್ಲ.

## ಲೆಕ್ಕಪರಿಶೋಧಕರ ಜವಾಬ್ದಾರಿ:

ನಮ್ಮ ಆಡಿಟ್ ಆಧರಿಸಿ, ಲೆಕ್ಕಪತ್ರ ಕುರಿತು ನಮ್ಮ ಅಭಿಪ್ರಾಯ ದಾಖಲಿಸಿದ್ದೇವೆ. ಭಾರತೀಯ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ ನಿಗದಿಪಡಿಸಿದ ಲೆಕ್ಕಪತ್ರ ಮಾನದಂಡಗಳನ್ನು ನಾವು ಬಳಸಿದ್ದೇವೆ. ಕಂಪನಿ ನೀಡಿದ ಹಣಕಾಸು ಕುರಿತ ಲೆಕ್ಕಪತ್ರಗಳನ್ನು ಆಧರಿಸಿ, ನೈತಿಕ ಕಟ್ಟುಪಾಡುಗಳಿಗೆ ಮಾನದಂಡಗಳಿಗೆ ಅನುಗುಣವಾಗಿ ಈ ದಾಖಲೆ ಸಿದ್ಧಪಡಿಸಲಾಗಿದೆ.

ಹಣಕಾಸು ಹೇಳಿಕೆಯಲ್ಲಿನ ಮೊತ್ತ ಹಾಗೂ ಉಲ್ಲೇಖಿಸಿದ ಸಂಗತಿಗಳನ್ನು ಬಳಸಿಕೊಂಡು ಲೆಕ್ಕಪತ್ರ ಸಿದ್ಧಪಡಿಸುವುದೇ ಆಡಿಟ್. ಮೋಸ ಇಲ್ಲವೇ ಲೋಪದಿಂದಾಗಿ ಆಗಬಹುದಾದ ಹೂಡಿಕೆಗೆ ಇರುವ ಕಂಟಕವನ್ನು ಆಡಿಟರ್ ಪರಿಶೀಲಿಸಬೇಕಾಗುತ್ತದೆ. ಕಂಟಕ ಕುರಿತು ಲೆಕ್ಕಿಸುವಾಗ, ಪರಿಸ್ಥಿತಿಗೆ ಅನುಗುಣವಾದ ಲೆಕ್ಕಪತ್ರ ಮಾದರಿಯನ್ನು ಆಡಿಟರ್ ಅನುಸರಿಸಬೇಕಾಗುತ್ತದೆ. ಆದರೆ ಕಂಪನಿಯ ಆಂತರಿಕ ನಿಯಂತ್ರಣದ ಅಭಿಪ್ರಾಯವನ್ನು ವ್ಯಕ್ತಪಡಿಸುವ ಉದ್ದೇಶವಿರುವುದಿಲ್ಲ. ಕಂಪನಿಯ ಲೆಕ್ಕಪತ್ರ ನೀತಿ, ಅಂದಾಜು ಲೆಕ್ಕಿಸುವಲ್ಲಿ ಮ್ಯಾನೇಜ್‌ಮೆಂಟ್ ಅನುಸರಿಸಿದ ವಿಧಾನ ಮತ್ತು ಮೌಲ್ಯಮಾಪನದ ರೀತಿಯನ್ನೂ ಆಡಿಟಿಂಗ್ ಒಳಗೊಂಡಿರುತ್ತದೆ.

ಆಡಿಟ್‌ಗೆ ಲಭ್ಯವಾದ ಆರ್ಥಿಕ ವಿವರಗಳು ಸೂಕ್ತವಾಗಿದೆ ಎಂದು ನಾವು ನಂಬಿದ್ದೇವೆ. ಕೆಳಕಂಡ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಗಮನ ಸೆಳೆದಿದ್ದೇವೆ.

## ಗಮನ ಹರಿಸಬೇಕಾದ ಅಂಶಗಳೆಂದರೆ:

1) ಬ್ಯಾಲೆನ್ಸ್ ಪಟ್ಟಿಯ ಆಸ್ತಿ ವಿಭಾಗದಲ್ಲಿ 'ಪ್ರಗತಿಯಲ್ಲಿರುವ ಕೆಲಸ'ದ ಮೊತ್ತ 29,89,52,33,053 ರೂ. ಎಂದು ಉಲ್ಲೇಖಿಸಲಾಗಿದೆ.

ಸಂಬಂಧಿಸಿದ ಏಜೆನ್ಸಿಗಳಿಂದ ಸಂಗ್ರಹಿಸಿದ ಮುಂಗಡ 36,90,62,29,222 ರೂ.ಗಳನ್ನು ಬ್ಯಾಲೆನ್ಸ್ ಪಟ್ಟಿಯಲ್ಲಿ ಇತರ ಸಾಲ ಮತ್ತು ಮುಂಗಡ ಎಂದು ಲೆಕ್ಕಿಸಲಾಗಿದೆ.

ಮೇಲಿನ ಎರಡೂ ಮೊತ್ತವನ್ನು ಅಂತಿಮ ಬಿಲ್ ಹೊಂದಾಣಿಕೆ ಆಗದ ಕಾರಣ ಇಡಿಯಾಗಿ ಪರಿಗಣಿಸಲಾಗಿದೆ.

ಈ ದೃಷ್ಟಿಯಲ್ಲಿ ನೋಡಿದಾಗ ನಮ್ಮ ಪ್ರಕಾರ,ಪ್ರಗತಿಯಲ್ಲಿರುವ ಕೆಲಸ'ದ ಮೊತ್ತ ಹಾಗೂ ಇತರ ಏಜೆನ್ಸಿಗಳಿಂದ ಸಂಗ್ರಹಿಸಿದ ಮುಂಗಡ ಇವೆರಡೂ ವಾಸ್ತವಕ್ಕಿಂತ ಹೆಚ್ಚು ಇದೆ ಮತ್ತು ವಿವರ ಲಭ್ಯವಿಲ್ಲದ ಕಾರಣ ಲೆಕ್ಕಿಸಲು ಸಾಧ್ಯವಾಗಿಲ್ಲ.

2) ಟಿಪ್ಪಣಿ ಸಂಖ್ಯೆ 1(3)ರ ಕುರಿತು ಗಮನ ಸೆಳೆಯಲಾಗಿದೆ. ಹೆಚ್ಚು ಸವಕಳಿ ಇಲ್ಲದ ನಿಗದಿತ ಠೇವಣಿ ಮತ್ತು ನಷ್ಟ ಉಂಟಾದಲ್ಲಿ ಅದು ಕಡಿಮೆ ಇರುವಂತೆ ನೋಡಿಕೊಳ್ಳುವುದು ಕಂಪನಿಯ ಲೆಕ್ಕಪತ್ರ ಕಾರ್ಯನೀತಿಯಾಗಿದೆ. ಅಕೌಂಟಿಂಗ್ ಮಾನದಂಡ 29ರ ಪ್ರಕಾರ,ಕಂಪನಿಯ 'ಇಂಪೇರ್‌ಮೆಂಟ್ ಆಫ್ ಅಸೆಟ್ಸ್'ನಡಿ ಇಂಪೇರ್‌ಮೆಂಟ್‌ನಿಂದ ಆದ ನಷ್ಟವನ್ನು ಗಣಿಸಬೇಕು ಮತ್ತು ಅದನ್ನು ಅದನ್ನು ದಾಖಲಿಸಬೇಕು. ಆದರೆ, ಕಂಪನಿ ಮಾ.31,2014ಕ್ಕೆ ಅನ್ವಯವಾಗುವಂತೆ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿದಂತೆ "ಇಂಪೇರ್‌ಮೆಂಟ್ ಆಫ್ ಅಸೆಟ್ಸ್'ನ ಮೌಲ್ಯವನ್ನು ಲೆಕ್ಕಿಸಿಲ್ಲ.

3) ನಾನಾ ನ್ಯಾಯಾಲಯಗಳಲ್ಲಿ ಕಂಪನಿ ವಿರುದ್ಧ 41 ಪ್ರಕರಣಗಳಿದ್ದು, ವಿಚಾರಣೆಯ ಹಂತದಲ್ಲಿವೆ. ಈ ಪ್ರಕರಣಗಳಿಗೆ ಸಂಬಂಧೀಸಿದಂತೆ ತೆರಬೇಕಾದ ಮೊತ್ತವನ್ನು ಕಂಪನಿ ಅಂದಾಜು ಮಾಡಿಲ್ಲ. ಅಕೌಂಟಿಂಗ್ ಮಾನದಂಡ 29 "ಪ್ರಾವಿಷನ್ಸ್, ಕಂಟಿಂಜೆಂಟ್ ಲಿಯಬಿಲಿಟೀಸ್ ಮತ್ತು ಕಂಟಿಂಜೆಂಟ್ ಅಸೆಟ್ಸ್'ರ ಪ್ರಕಾರ, ಕಂಪನಿಯು ಡಿಸ್‌ಕ್ಲೋಸರ್ ನಿಯಮಗಳನ್ನು ಅನುಸರಿಸಇಲ್ಲ ಎಂಬುದು ನಮ್ಮ ಅಭಿಪ್ರಾಯ.ವಿವರ ಲಭ್ಯವಿಲ್ಲದ ಹಿನ್ನೆಲೆಯಲ್ಲಿ ಈ ಮೊತ್ತ ಎಷ್ಟಿದೆ ಎಂಬುದನ್ನು ಲೆಕ್ಕಿಸಲು ಆಗಿಲ್ಲ.

4) ಟಿಪ್ಪಣಿ ಸಂಖ್ಯೆ 1,ಅಂಶ 28ರ ಬಗ್ಗೆ ಗಮನ ಸೆಳೆಯಲು ಇಚ್ಛಿಸುತ್ತೇವೆ. 'ವರ್ಕ್ ಇನ್ ಪ್ರೋಗ್ರೆಸ್'ಗೆ ಸಲ್ಲಿಸಬೇಕಾದ ವ್ಯಾಟ್ ಮತ್ತು ವ್ಯಾಟ್ ವಾಪಸಾತಿ ಕುರಿತು ಉಲ್ಲೇಖಿಸಿಲ್ಲ. ಈ ಹಿನ್ನೆಲೆಯಲ್ಲಿ ಕಂಪನಿಯ ಲಾಭ ನಷ್ಟ ಮತ್ತು ಬ್ಯಾಲೆನ್ಸ್ ಶೀಟ್ ಮೇಲೆ ಇದರ ಪರಿಣಾಮವನ್ನು ತಿಳಿಸಲು ಸಾಧ್ಯವಾಗಿಲ್ಲ.

5) ಟಿಪ್ಪಣಿ 1, ಅಂಶ 31ಕ್ಕೆ ಸಂಬಂಧಿಸಿದಂತೆ, ಜಬಲ್ಪುರ ಯೋಜನೆಗೆ ಕೊಡಮಾಡಿದ ಇಎಂಡಿ 201.29 ಲಕ್ಷ ರೂ.ಮುಟ್ಟಗೋಲು ಹಾಕಿಕೊಂಡಿದ್ದು, 511.51 ಲಕ್ಷ ರೂ.ಮುಂಗಡ ಪಡೆದ ಸಹ ಗುತ್ತಿಗೆದಾರರು ನಾಪತ್ತೆಯಾಗಿರುವುದರಿಂದ ಆದ ನಷ್ಟವನ್ನು ಕಂಪನಿಯ ಲೆಕ್ಕಪತ್ರ ಪುಸ್ತಕದಲ್ಲಿ ನಷ್ಟ ಎಂದು ಪರಿಗಣಿಸಿಲ್ಲ. ಹೀಗಾಗಿ, ಇಎಂಡಿ ಮತ್ತು ಮುಂಗಡವನ್ನು ಹೆಚ್ಚುವರಿಯಾಗಿ ಹಾಗೂ ವೆಚ್ಚವನ್ನು ಕಡಿಮಾ ತೋರಿಸಲಾಗಿದೆ.ಈ ಪ್ರಮಾಣ 712.80 ಲಕ್ಷ ರೂ.

6) ಟಿಪ್ಪಣಿ 1, ಅಂಶ 32 ರ ಪ್ರಕಾರ ಕಂಪನಿ ಉದ್ಯೋಗಿಗಳಿಂದ ಮಾರ್ಚ್ 31, 2014ಕ್ಕೆ ಅನ್ವಯವಾಗುವಂತೆ ಇನ್ವೆಂಟರಿ ಕೊರತೆ ಎಂದು 100.24 ಲಕ್ಷ ರೂ. ಸಂಗ್ರಹಿಸಿದೆ. ಆದರೆ ಈ ಮೊತ್ತವನ್ನು ಆದಾಯ ಎಂದು ಪರಿಗಣಿಸಿಲ್ಲ. ಕಳೆದ ವರ್ಷಗಳಲ್ಲೂ ಇನ್ವೆಂಟರಿ ಕೊರತೆಯನ್ನು ವಜಾ ಮಾಡಲಾಗಿದೆ. ಇದರಿಂದ ಆದಾಯವನ್ನು ಕಡಿಮೆ ಮತ್ತು ಆಸ್ತಿ ಹೆಚ್ಚು ಉಲ್ಲೇಖಿಸಿದಂತೆ ಆಗಲಿದೆ.

## ಪ್ರಾಶಸ್ತ್ಯ ನೀಡಬೇಕಾದ ವಿಷಯ:

1) ಪಾವತಿಸಬೇಕಾದ, ಸಂದಾಯವಾಗಬೇಕಾದ ಮೊತ್ತ, ಸಾಲ ಮತ್ತು ಮುಂಗಡಗಳು ಖಾತ್ರಿ ಮತ್ತು ಸಂಧಾನವನ್ನು ಆಧರಿಸಿವೆ.

## ಅರ್ಹತೆಗೊಂಡ ಅಭಿಪ್ರಾಯ:

ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳನ್ನು ಆಧರಿಸಿ ಹಾಗೂ ಕಾಯಿದೆ ಹೇಳಿದಂತೆ ನಮಗೆ ನೀಡಲಾದ ಮಾಹಿತಿಯನ್ನು ಆಧರಿಸಿ ಈ ಹಣಕಾಸು ವರದಿ ನೀಡಿದ್ದು, ಇದು ದೇಶದಲ್ಲಿ ಅಂಗೀಕರಿಸಿದ ನೀತಿ-ನಿಯಮಗಳಿಗೆ ಅನುಗುಣವಾಗಿ ಇದೆ.

ಎ) ಬ್ಯಾಲೆನ್ಸ್ ಶೀಟ್ ಮಾರ್ಚ್ 31,2014ಕ್ಕೆ ಕಂಪನಿಯ ವಹಿವಾಟಿಗೆ ಅನುಗುಣವಾಗಿದೆ.

ಬಿ) ಲಾಭ-ನಷ್ಟ ಹೇಳಿಕೆಯು ಮೇಲಿನ ವರ್ಷಾಂತ್ಯಕ್ಕೆ ಅನ್ವಯಿಸುತ್ತದೆ

ಸಿ) ಹಣ ಹರಿವು ಹೇಳಿಕೆಯು ಮೇಲಿನ ವರ್ಷಾಂತ್ಯಕ್ಕೆ ಅನ್ವಯಿಸುತ್ತದೆ

## ಇತರ ಶಾಸನಾತ್ಮಕ ಮತ್ತು ನಿಯಂತ್ರಣ ಅಗತ್ಯ ಕುರಿತ ವರದಿ

1. ಭಾರತ ಸರ್ಕಾರದ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಕಾಯಿದೆ 2003ರ ಉಪ ವಿಭಾಗ 4ಎ, ವಿಭಾಗ 227ರ ಪ್ಯಾರಾ 4 ಮತ್ತು 5 ರ ಪ್ರಕಾರ ಕೊಡಬೇಕಾದ ಮಾಹಿತಿಗಳ ಹೇಳಿಕೆಯನ್ನು ಅನೆಕ್ಸರ್‌ನಲ್ಲಿ ಕೊಡಲಾಗಿದೆ.
2. ಕಾಯಿದೆಯ ವಿಭಾಗ 227(3)ರ ಪ್ರಕಾರ, ನಾವು ವರದಿ ನೀಡುವುದೇನೆಂದರೆ,
   - ಎ) ನಮ್ಮ ತಿಳಿವು ಮತ್ತು ಅರಿವಿಗೆ ಗೊತ್ತಾದಂತೆ ಆಡಿಟ್‌ಗೆ ಅಗತ್ಯವಾದ ಎಲ್ಲ ಮಾಹಿತಿ ಮತ್ತು ವಿವರಣೆ ಪಡೆದಿದ್ದೇವೆ.
   - ಬಿ) ಕಾನೂನಿನಂತೆ ಇಡಬೇಕಾದ ದಾಖಲೆ ಮತ್ತು ಲೆಕ್ಕಪತ್ರ ಪುಸ್ತಕಗಳನ್ನು ಕಂಪನಿ ಇಟ್ಟಿದೆ. ಈ ಬಗ್ಗೆ ಸಂಬಂಧಿಸಿದ ಪುಸ್ತಕಗಳನ್ನು ನಾವು ಪರಿಶೀಲಿಸಿದ್ದೇವೆ.
   - ಸಿ) ಬ್ಯಾಲೆನ್ಸ್ ಶೀಟ್‌ಲಾಭ ಮತ್ತು ವೆಚ್ಚದ ಹೇಳಿಕೆ ಹಾಗೂ ಹಣ ಹರಿವು ಹೇಳಿಕೆಗಳು ಲೆಕ್ಕ ಪುಸ್ತಕದಲ್ಲಿ ಇದ್ದಂತೆ ಇವೆ.
   - ಡಿ) ಬ್ಯಾಲೆನ್ಸ್ ಶೀಟ್‌ಲಾಭ ಮತ್ತು ವೆಚ್ಚದ ಹೇಳಿಕೆ ಹಾಗೂ ಹಣ ಹರಿವು ಹೇಳಿಕೆಗಳು 1956ರ ಕಂಪನಿಗಳ ಕಾಯ್ದೆ(ಕಾಯ್ದೆ) ಜತೆಗೆ ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯದ 2013ರ ಕಂಪನಿಗಳ ಕಾಯ್ದೆಯ 133ನೇ ಸೆಕ್ಷನ್ ಅನ್ವಯ 13ನೇ ಸೆಪ್ಟೆಂಬರ್ 2013ರ ಸಾಮಾನ್ಯ ಸುತ್ತೋಲೆ ಮತ್ತು ಭಾರತ ದೇಶದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕಪತ್ರ ಮಾನದಂಡಗಳನ್ನು ಆಧರಿಸಲಾಗಿದೆ ಎಂಬುದು ನಮ್ಮ ಅಭಿಪ್ರಾಯ.
   - ಇ) ಕಂಪನಿ ವ್ಯವಹಾರಗಳ ಇಲಾಖೆಯ ನೋಟಿಫಿಕೇಷನ್ ಸಂಖ್ಯೆ ಜಿಎಸ್‌ಆರ್ 829(ಇ), ದಿನಾಂಕ 21 ಅಕ್ಟೋಬರ್ 2003 ರಂದು ಆದೇಶಿಸಿ, ಭಾರತ ಸರ್ಕಾರದ ಗೆಜೆಟ್‌ನ ಭಾಗ 2, ವಿಭಾಗ 3(1)ರಲ್ಲಿ ಪ್ರಕಟವಾದಂತೆ ಕಂಪನಿಯು ಸರ್ಕಾರದ ಕಂಪನಿಯಾಗಿದೆ. ಹೀಗಾಗಿ, ನಿರ್ದೇಶಕರ ಅರ್ನಹತೆಗೆ ಸಂಬಂಧಿಸಿದಂತೆ 1956ರ ಕಂಪನಿಗಳ ಕಾಯಿದೆಯ ವಿಭಾಗ 274 ಉಪವಿಭಾಗ 1ರ ಉಪವಾಕ್ಯ(ಜಿ)ಕಂಪನಿಗೆ ಅನ್ವಯಿಸುವುದಿಲ್ಲ.

**ಮಲ್ಯ ಅಂಡ್ ಮಲ್ಯ ಪರವಾಗಿ**
ಚಾರ್ಟರ್ಡ್ ಅಕೌಂಟೆಂಟ್ಸ್
ನೋಂದಣಿ ಸಂಖ್ಯೆ 001955ಎಸ್

ಸಹಿ/–
**(ಸಿ.ಎಸ್. ಪ್ರಶಾಂತ್)**
ಪಾಲುದಾರ
ಎಂ.ನಂ. 218355

ಸ್ಥಳ : ಬೆಂಗಳೂರು
ದಿನಾಂಕ : 04–12–2014

## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್
### ಇದರ 2013ರ ನವೆಂಬರ್ 26ನೇ ದಿನಾಂಕದ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-1

1. ಸ್ಥಿರ ಆಸ್ತಿಗಳು:
   ಎ) ಕಂಪನಿಯು, ಸ್ಥಿರ ಆಸ್ತಿಯ ಸ್ಥಳ ಮತ್ತು ಪ್ರಮಾಣದ ವಿವರಗಳೂ ಒಳಗೊಂಡಂತೆ ಪೂರ್ಣ ವಿವರಗಳನ್ನು ತೋರಿಸುವ ಸರಿಯಾದ ದಾಖಲೆಗಳನ್ನು ಇಟ್ಟಿದೆ.
   ಬಿ) ಆಡಳಿತ ಮಂಡಳಿಯು ಸ್ಥಿರ ಆಸ್ತಿಗಳನ್ನು ಭೌತಿಕವಾಗಿ ಪರಿಶೀಲನೆ ಮಾಡಿದೆ. ನಮ್ಮ ಅಭಿಪ್ರಾಯದಲ್ಲಿ ಪರಿಶೀಲನೆ ಸಹ ಸಮರ್ಪಕವಾಗಿದೆ, ಅದಾಗ್ಯೂ ಭೌತಿಕ ತಪಾಸಣಾ ಪಟ್ಟಿಯನ್ನು ಸ್ಥಿರ ಆಸ್ತಿಗಳ ಪಟ್ಟಿಯನ್ನು ದಾಸ್ತಾವೇಜು ದಾಖಲೆಗೆ ಹೊಂದಾಣಿಕೆ ಮಾಡಿರುವುದಿಲ್ಲ ಮತ್ತು ವ್ಯತ್ಯಾಸವೇನಾದರೂ ಇದ್ದಲ್ಲಿ ಹೊಂದಾಣಿಕೆಯಾಗದೆ ಉಳಿದಿದೆ.
   ಸಿ) ನಿಗಮವು ಹೆಚ್ಚಿನ ಸ್ಥಿರ ಆಸ್ತಿಗಳನ್ನು ಪ್ರಸಕ್ತ ವರ್ಷದಲ್ಲಿ ಮಾರಾಟ ಮಾಡಿರುವುದಿಲ್ಲ. ಆದುದರಿಂದ ಕಂಪನಿಯು ಮುಂದುವರಿಕೆಗೆ ಇದರಿಂದ ಯಾವುದೇ ಹಾನಿಯಾಗಿಲ್ಲ.

2. ಸಾಮಗ್ರಿಗಳ ಬಗ್ಗೆ
   ಎ) ನಮಗೆ ವರದಿ ಮಾಡಿದ ಪ್ರಕಾರ ಕಟ್ಟಡ ಸಾಮಗ್ರಿಗಳನ್ನು ಆಡಳಿತ ಮಂಡಳಿಯು ಭೌತಿಕವಾಗಿ ಪರಿಶೀಲನೆ ಮಾಡಿದೆ ಅದಾಗ್ಯೂ ಪರಿಶೀಲನಾ ಅಂತರದ ಸಂಖ್ಯೆಗಳನ್ನು ನಿಗಮದ ವಹಿವಾಟಿಗೆ ಅನುಸಾರವಾಗಿ ಇನ್ನು ಹೆಚ್ಚಿನ ಅಗತ್ಯವಿರುತ್ತದೆ.
   ಬಿ) ನಮ್ಮ ಅಭಿಪ್ರಾಯದಲ್ಲಿ ನಮಗೆ ಕೊಟ್ಟಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಸಾಮಗ್ರಿಗಳ ಭೌತಿಕ ತಪಾಸಣೆ ಕಂಪನಿಯ ಗಾತ್ರ ಮತ್ತು ವ್ಯವಹಾರದ ಪದ್ಧತಿಗೆ ಸಮಂಜಸವಾಗಿರುತ್ತದೆ.
   ಸಿ) ನಮ್ಮ ಅಭಿಪ್ರಾಯದಲ್ಲಿ ನಮಗೆ ಕೊಟ್ಟಿರುವ ವಿವರಣೆಗಳ ಪ್ರಕಾರ ಕಂಪನಿಯು ಸೂಕ್ತ ಲೆಕ್ಕ ಪತ್ರಗಳನ್ನು ಸಾಮಗ್ರಿಗಳ ನಿರ್ವಹಣೆಗೆ ಇಟ್ಟಿರುತ್ತದೆ ಮತ್ತು ಭೌತಿಕ ತಪಾಸಣೆಯ ಸಮಯದಲ್ಲಿ ಯಾವುದೇ ಸಾಮಗ್ರಿಗಳ ಕುಂದು ಕೊರತೆಗಳು ಕಂಡು ಬಂದಿರುವುದಿಲ್ಲ.
   ಡಿ) ವರ್ಷದ ಅಂತ್ಯದಲ್ಲಿ ಸ್ಥಳದಲ್ಲಿ ಸಂಗ್ರಹಗೊಂಡ ಮರಳು, ಜಲ್ಲಿಯ ಮೌಲ್ಯಮಾಪನ ಮಾಡಿಲ್ಲ ಮತ್ತು ಅದೇ ವರ್ಷ ಬಳಕೆಯಾಗಿದೆ ಎಂದು ಪರಿಗಣಿಸಲಾಗಿದೆ.

3. ಕಂಪನಿಯು, ಕಂಪನಿಗಳ ಅಧಿನಿಯಮ, 1956ರ 301ನೇ ಪ್ರಕರಣದ ಅಡಿಯಲ್ಲಿ ನಿರ್ವಹಿಸಿರುವ ರಿಜಿಸ್ಟರಿನಲ್ಲಿ ಪಟ್ಟಿ ಮಾಡಿರುವ ಕಂಪನಿಗಳು, ಫರ್ಮುಗಳ ಅಥವಾ ಇತರ ಪಕ್ಷಕಾರರಿಂದ ಭದ್ರತೆಯಿರುವ ಅಥವಾ ಭದ್ರತೆಯಿಲ್ಲದಿರುವ ಸಾಲಗಳನ್ನು ಮಂಜೂರು ಮಾಡಿಲ್ಲ ಅಥವಾ ತೆಗೆದುಕೊಂಡಿಲ್ಲ. ಆದರೆ, ಕಂಪನಿ ಹುಡ್ಕೋ ಲಿಮಿಟೆಡ್‌ನಿಂದ 21,29,92,914 ರೂ.ಸಾಲವನ್ನು ಪಡೆದಿದ್ದು, ಇದರ ಫಲಾನುಭವಿ ಕರ್ನಾಟಕ ಸರ್ಕಾರ ಎಂದು ಟಿಪ್ಪಣಿ 4(ಎ) (ಬಿ) (ಸಿ) (ಡಿ) ಯಲ್ಲಿದೆ, ಇದನ್ನು ಎಸ್‌ಜಿವೈ ಅನುದಾನದಲ್ಲಿ 20,08,59,063 ರೂ.ಹಾಲಿ ಆಸ್ತಿ ಎಂದು ಪರಿಗಣಿಸಲಾಗಿದೆ.

4. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಬೆಲೆ ಪಟ್ಟಿಯಲ್ಲಿರುವ ಎಲ್ಲ ಸಾಮಾನುಗಳ ಖರೀದಿಗೆ ಮತ್ತು ಸ್ಥಿರ ಆಸ್ತಿಗಳ ಮತ್ತು ಸರಕುಗಳು, ನಿರ್ಮಾಣ ಸಾಮಗ್ರಿಗಳು, ಸ್ಥಾವರಗಳು ಮತ್ತು ಯಂತ್ರ ಸಾಮಗ್ರಿಗಳು ಮತ್ತು ಪರಿಕರಗಳು ಮತ್ತು ಇತರ ನಿರ್ಮಾಣ ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಇತರ ಸ್ವತ್ತುಗಳ ಖರೀದಿಗೆ ಕಂಪನಿಯ ಗಾತ್ರ ಮತ್ತು ಅದರ ವ್ಯವಹಾರದ ಸ್ವರೂಪಕ್ಕೆ ಅನುಗುಣವಾಗಿ ಪರ್ಯಾಪ್ತ ಆಂತರಿಕ ನಿಯಂತ್ರಣ ವಿಧಾನಗಳಿಲ್ಲ.

5. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಗಳ ಅಧಿನಿಯಮ 1956ರ 301ನೇ ಪ್ರಕರಣದ ಮೇರೆಗೆ ನಿರ್ವಹಿಸಲಾದ ರಿಜಿಸ್ಟರಿನಲ್ಲಿ ನಮೂದಿಸಬೇಕಾದ ಯಾವುವೇ ವ್ಯವಹಾರಗಳು ಇಲ್ಲ ಎಂದು ನಾವು ಅಭಿಪ್ರಾಯ ಪಡುತ್ತೇವೆ.

6. ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಕಂಪನಿಗಳ ಅಧಿನಿಯಮ 1956ರ 58ಎ ಪ್ರಕರಣದ ಉಪಬಂಧಗಳು ಅನ್ವಯಿಸುವುದಿಲ್ಲ.

7. ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ತನ್ನ ಗಾತ್ರ ಮತ್ತು ವ್ಯವಹಾರ ಸ್ವರೂಪಕ್ಕೆ ಅನುಗುಣವಾದ ಆಂತರಿಕ ಲೆಕ್ಕಪರಿಶೋಧನೆಯ ವ್ಯವಸ್ಥೆಯನ್ನು ಹೊಂದಿದೆ. ಆದರೆ ಮುಂದಿನ ದಿನಗಳಲ್ಲಿ ಆಂತರಿಕ ಲೆಕ್ಕ ಪರಿಶೋಧನೆಯನ್ನು ಬಲಪಡಿಸಬೇಕಾಗಿದೆ.

8. ಭಾರತ ಸರ್ಕಾರವು, ಕಂಪನಿಗಳ ಅಧಿನಿಯಮ 1956ರ 209 (1) (ಡಿ) ಪ್ರಕರಣದ ಅಡಿಯಲ್ಲಿ ದಾಖಲೆಗಳ ನಿರ್ವಹಣಾ ವೆಚ್ಚವನ್ನು ನಿಗದಿಪಡಿಸಿಲ್ಲ.

9. ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಶಾಸನಬದ್ಧ ಬಾಕಿಗಳು ಮತ್ತು ಇತರ ಬಾಕಿಗಳಿಗೆ ಸಂಬಂಧಿಸಿದಂತೆ ಪರೀಕ್ಷೆಗೊಳಪಡಿಸಿ ಪುಸ್ತಕಗಳು ಮತ್ತು ದಾಖಲೆಗಳನ್ನು ಬಿಡುಗಡೆ ಮಾಡಿದ್ದೇವೆ.

ಎ) ಭವಿಷ್ಯ ನಿಧಿ (ಪಿ.ಎಫ್), ಇಎಸ್‌ಐ, ವರಮಾನ ತೆರಿಗೆ, ಮಾರಾಟ ತೆರಿಗೆ, ಸಂಪತ್ತು ತೆರಿಗೆ, ಸೀಮಾ ಶುಲ್ಕ, ಅಬ್ಕಾರಿ ತೆರಿಗೆ ಮತ್ತು ಇತರ ಶಾಸನಬದ್ಧ ಬಾಕಿಗಳೂ ಸೇರಿದಂತೆ ವಿವಾದರಹಿತವಾದ ಶಾಸನಬದ್ಧ ಬಾಕಿಗಳನ್ನು ಸ್ವಲ್ಪ ತಡವಾಗಿ ಕಂಪನಿಯು ನಿಯತವಾಗಿ ಸಂದಾಯ ಮಾಡುತ್ತಿದೆ.

(ಬಿ) ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆಯ ಪ್ರಕಾರ, ಕಂಪನಿಯು, 2014ರ ಮಾರ್ಚ್ 31ರಂದು ಇರುವಂತೆ ಆರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಯಾವುವೇ ಬಾಕಿಗಳು ಅಂದರೆ, ವರಮಾನ ತೆರಿಗೆ, ಸೀಮಾಶುಲ್ಕ, ಅಬ್ಕಾರಿ ಶುಲ್ಕ, ಉಪಕರ (ಸೆಸ್) ಮತ್ತು ಯಾವುದೇ ಇತರ ಶಾಸನಬದ್ಧ ಬಾಕಿಗಳು ಒಳಗೊಂಡಂತೆ ಅವಿವಾದಿತ ಯಾವುದೇ ಶಾಸನಬದ್ಧ ಬಾಕಿಗಳನ್ನು ಉಳಿಸಿಕೊಂಡಿಲ್ಲ. ರೂ.1.86 ಲಕ್ಷಗಳ ಅಬ್ಕಾರಿ ಶುಲ್ಕ ಮತ್ತು ರೂ.695.63 ಲಕ್ಷಕ್ಕೆ ಮಾರಾಟ ತೆರಿಗೆ ಹಾಗೂ ಇದರಲ್ಲಿ ರೂ.32.00 ಲಕ್ಷಗಳನ್ನು 2008-09ರಲ್ಲಿ ಪಾವತಿಸಿ ಖರ್ಚಾಗಿ ಮತ್ತು ಟಿಪ್ಪಣಿ 1, ಅಂಶ 34 ರ ಪ್ರಕಾರ, ಕೆಎಸ್‌ಟಿ 392.57 ಲಕ್ಷ ರೂ. ಹಾಗೂ ವ್ಯಾಟ್ 89.93 ಲಕ್ಷ ರೂ. ತೋರಿಸಿದ್ದನ್ನು ಬಿಟ್ಟು.

10. ಆಯವ್ಯಯ ಪತ್ರ ದಿನಾಂಕದಂದು ಯಾವುದೇ ಶೇಖರಣೆಯಾದ ನಷ್ಟಗಳು ಇರುವುದಿಲ್ಲ. ಕಂಪನಿಯು ಪ್ರಸಕ್ತ ವರ್ಷದಲ್ಲಿ ಮತ್ತು ಹಿಂದಿನ ವರ್ಷದಲ್ಲಿ ನಗದು ನಷ್ಟವನ್ನು ಅನುಭವಿಸಿರುವುದಿಲ್ಲ.

11. ಲೆಕ್ಕಪರಿಶೋಧನಾ ಕಾರ್ಯವಿಧಾನವನ್ನು ಆಧರಿಸಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ, ಯಾವುದೇ ಹಣಕಾಸು ಸಂಸ್ಥೆಗಳಿಗೆ ಅಥವಾ ಬ್ಯಾಂಕುಗಳಿಗೆ ಬಾಕಿಗಳ ಮರುಸಂದಾಯ ಮಾಡುವುದನ್ನು ಕಂಪನಿಯು ತಪ್ಪಿಸಿಲ್ಲ.

12. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಲಾದ ವಿವರಣೆಗಳಿಗೆ ಅನುಸಾರವಾಗಿ ಮತ್ತು ಲಭ್ಯವಿರುವ ಮಾಹಿತಿಯನ್ನು ಆಧರಿಸಿ ಹೇಳುವುದಾದರೆ ಆದೇಶ (xii) ಕಂಪನಿಯು, ಷೇರುಗಳ, ಡಿಬೆಂಚರುಗಳ ಮತ್ತು ಇತರ ಭದ್ರತೆಗಳ ಒತ್ತೆ ಮೂಲಕ, ಭದ್ರತೆಯ ಆಧಾರದ ಮೇಲೆ ಯಾವುದೇ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡಿಲ್ಲ.

13. ಕಂಪನಿಯು, ಷೇರುಗಳ, ಭದ್ರತೆಗಳ, ಡಿಬೆಂಚರುಗಳ ಮತ್ತು ಇತರೆ ಹೂಡಿಕೆಗಳ ವ್ಯವಹಾರವನ್ನು ಮಾಡುತ್ತಿಲ್ಲ ಅಥವಾ ವ್ಯಾಪಾರ ಮಾಡುತ್ತಿಲ್ಲ. ಆದ್ದರಿಂದ ಕಂಪನಿಗಳ (ಲೆಕ್ಕಪರಿಶೋಧಕರ) ಆದೇಶ (xiii)ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ. ಮ್ಯೂಚ್ಯುಯಲ್ ಫಂಡ್ ಖರೀದಿ ಮತ್ತು ಮಾರಾಟಗಳು ಪ್ರಸಕ್ತ ವರ್ಷದಲ್ಲಿ ಕಂಪನಿಯ ಹೆಸರಿನಲ್ಲಿ ನಡೆದಿರುತ್ತದೆ.

14. ಕಂಪನಿಯು ಈ ಸಾಲಿನಲ್ಲಿ ಖರೀದಿಸಿರುವುದು ಮತ್ತು ಸಾಲನಿಧಿಗಳ ಬಗ್ಗೆ ನಮ್ಮ ಅಭಿಪ್ರಾಯದಂತೆ ನಮಗೆ ಮಾಹಿತಿಯನ್ನು ನೀಡಿದ್ದು, ಕಂಪನಿಯ ಹೆಸರಿನಲ್ಲಿ ತೆಗೆದುಕೊಂಡ ಸಾಲನಿಧಿಯ ಬಗ್ಗೆ ದಾಖಲೆ ನೀಡಲಾಗಿರುತ್ತದೆ.

15. ನಮಗೆ ನೀಡಿದ ಮಾಹಿತಿ ಮತ್ತು ವುವರಣೆಗಳ ಪ್ರಕಾರ, ಕಂಪನಿಯು ಷೇರ್ ಇಲ್ಲವೇ ಮ್ಯೂಚುಯಲ್ ಫಂಡ್‌ನಲ್ಲಿ ವಹಿವಾಟು ನಡೆಸಿಲ್ಲ. ಆದರೆ, ವರ್ಷದ ಮಧ್ಯದ ವರೆಗೆ ಹೂಡಿಕೆ ಚಟುವಟಿಕೆಯ ಅಂಗವಾಗಿ ಮ್ಯೂಚುಯಲ್ ಫಂಡ್‌ಗಳನ್ನು ಖರೀದಿಸಿದೆ ಮತ್ತು ಮಾರಾಟ ಮಾಡಿದೆ. ಕಂಪನಿಯ ನಿರ್ದೇಶಕರ ಮಂಡಳಿಯ ಗೊತ್ತುವಳಿಯಂತೆ ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ನಿಲ್ಲಿಸಿದೆ.

16. ಸ್ವಚ್ಛ ಗ್ರಾಮ ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರದ ಒಂದು ನೋಡಲ್ ಏಜೆನ್ಸಿಯಾಗಿ ಕಂಪನಿಯು, ಹುಡ್ಕೋ ಲಿಮಿಟೆಡ್‌ನಿಂದ ಪಡೆದುಕೊಂಡ ಸಾವಧಿಕ ಸಾಲವನ್ನು, ಅದನ್ನು ಮಂಜೂರ್ಮಾಡಲಾದ ಉದ್ದೇಶಕ್ಕಾಗಿಯೇ ವಿನಿಯೋಗಿಸಿದೆ ಹಾಗೂ ರೂ. 21,29,92,914/- ಪುಸ್ತಕದಲ್ಲಿ ಬಾಕಿ ಇರುತ್ತದೆ.

17. ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳಿಗನುಸಾರ ಮತ್ತು ಕಂಪನಿಯ ಜಮಾ ಖರ್ಚು ಪಟ್ಟಿಯನ್ನು (ಬ್ಯಾಲೆನ್ಸ್ ಶೀಟ್) ಒಟ್ಟಾರೆ ಪರಿಶೀಲನೆ ಮಾಡಿದಾಗ ಅಲ್ಪಾವಧಿ ಆಧಾರದ ಮೇಲೆ ಪಡೆದುಕೊಂಡ ಯಾವುದೇ ನಿಧಿಗಳನ್ನು ದೀರ್ಘಾವಧಿ ಹೂಡಿಕೆಗಾಗಿ ಬಳಸಲಾಗಿಲ್ಲ ಎಂಬುದು ನಮ್ಮ ಅಭಿಪ್ರಾಯ.

18. ಕಂಪನಿಗಳ ಅಧಿನಿಯಮ, 1956ರ 301ನೇ ಪ್ರಕರಣದ ಅಡಿಯಲ್ಲಿ ನಿರ್ವಹಿಸಲಾದ ರಿಜಿಸ್ಟರಿನಲ್ಲಿ ನಮೂದಿಸಲಾದ ಪಕ್ಷಕಾರರಿಗೆ (ಪಾರ್ಟಿಗಳಿಗೆ) ಮತ್ತು ಕಂಪನಿಗಳಿಗೆ ಆದ್ಯತೆಯ ಮೇಲೆ ಷೇರುಗಳನ್ನು ಕಂಪನಿಯು ಹಂಚಿಕೆ ಮಾಡಿಲ್ಲ. ಕಂಪನಿಯು ಯಾವುದೇ ಡಿಬೆಂಚರುಗಳನ್ನು ನೀಡಿಲ್ಲ.

19. ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ಲೆಕ್ಕಪುಸ್ತಕಗಳ ಪರಿಶೀಲನೆಯಿಂದ, ಕಂಪನಿಯು ಸಾರ್ವಜನಿಕ ನೀಡಿಕೆಯ ಮೂಲಕ ಯಾವುದೇ ಹಣವನ್ನು ಪಡೆದುಕೊಂಡಿಲ್ಲವೆಂದು ತಿಳಿದುಬರುತ್ತದೆ.

20. ಕಂಪನಿಯು ಪ್ರಸಕ್ತ ಸಾಲಿನಲ್ಲಿ ಕೆಳಗಿನ ವರದಿಯ ಆಧಾರದಂತೆ ಸಾರ್ವಜನಿಕ ಷೇರು ಬಂಡವಾಳ ಸಂಗ್ರಹಿಸಿಲ್ಲ ಹಾಗೂ ಆದೇಶ (xx) ಅಧಿನಿಯಮ ಇದಕ್ಕೆ ಅನ್ವಯವಾಗುವುದಿಲ್ಲ.

21. ನಮಗೆ ಕೊಟ್ಟಿರುವ ಮಾಹಿತಿಯ ಪ್ರಕಾರ 7 ನೌಕರರು ರೂ. 83.21 ಲಕ್ಷ ಮೌಲ್ಯದ ಕಟ್ಟಡ ಸಾಮಗ್ರಿಗಳನ್ನು ಪ್ರಸಕ್ತ ವರ್ಷದಲ್ಲಿ ದುರುಪಯೋಗಪಡಿಸಿಕೊಂಡಿರುತ್ತಾರೆ. ಈ ಸಂಬಂಧದಲ್ಲಿ ವಿಚಾರಣೆಗಳು ಪ್ರಗತಿಯಲ್ಲಿದೆ. ಆದಾಗ್ಯೂ ದುರುಪಯೋಗಗೊಂಡಿರುವ ಮೊತ್ತವನ್ನು ಲಾಭ ಮತ್ತು ನಷ್ಟದ ಖಾತೆಯಲ್ಲಿ ಸೇರಿಸಲಾಗಿದೆ ಹಾಗೂ ವಿಚಾರಣೆಯು ಮುಗಿದು ದುರುಪಯೋಗಪಡಿಸಿಕೊಂಡಿರುವ ಮೊತ್ತವನ್ನು ಸಂಬಂಧಪಟ್ಟ ನೌಕರರಿಂದ ವಸೂಲು ಮಾಡಲಾಗುವುದು.

**ಮಲ್ಯ ಅಂಡ್ ಮಲ್ಯ ಪರವಾಗಿ**
ಚಾರ್ಟರ್ಡ್ ಆಕೌಂಟೆಂಟ್ಸ್
ನೋಂದಣಿ ಸಂಖ್ಯೆ 001955ಎಸ್

ಸಹಿ/-
**(ಸಿ.ಎಸ್. ಪ್ರಶಾಂತ್)**
ಪಾಲುದಾರ
ಎಂ.ನಂ. 218355

ಸ್ಥಳ : ಬೆಂಗಳೂರು
ದಿನಾಂಕ : 04-12-2014

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್

ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು – 560009

## 31ನೇ ಮಾರ್ಚ್ 2014ರ ಆಯ-ವ್ಯಯ ಪಟ್ಟಿ

| ವಿವರಗಳು | ಟಿಪ್ಪಣಿ ಸಂಖ್ಯೆ | 31-03-2014 ಕ್ಕೆ | | 31-03-2013 ಕ್ಕೆ | |
|---|---|---|---|---|---|
| | | ರೂ | ರೂ | ರೂ | ರೂ |
| **ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | | | |
| **1. ಷೇರುದಾರರ ನಿಧಿಗಳು** | | | | | |
| (ಎ) ಷೇರು ಬಂಡವಾಳ | 2 | 122,500,000 | | 122,500,000 | |
| (ಬಿ) ಮೀಸಲುಗಳು ಮತ್ತು ಹೆಚ್ಚುವರಿ | 3 | 2,098,153,816 | 2,220,653,816 | 1,435,905,890 | 1,558,405,890 |
| **2. ಹಂಚಿಕೆಗಾಗಿ ಉಳಿದಿರುವ ಷೇರು ಹಂಚಿಕೆ ಹಣ** | | | | | |
| **3. ಚಾಲ್ತಿಯಲ್ಲದ ಹೊಣೆಗಾರಿಕೆಗಳು** | | | | | |
| (ಎ) ದೀರ್ಘಾವಧಿ ಸಾಲಗಳು | 4 | 87,504,914 | | 213,070,221 | |
| (ಬಿ) ಇತರೆ ದೀರ್ಘಾವಧಿ ಸಾಲಗಳು | 5 | 395,691,752 | 483,196,666 | 369,430,246 | 582,500,467 |
| **4. ಚಾಲ್ತಿಯಲ್ಲಿರುವ ಹೊಣೆಗಾರಿಕೆಗಳು** | | | | | |
| (ಎ) ಟ್ರೇಡ್ ಪಾವತಿಸಬೇಕಿರುವುದು | 6 | 138,125,065 | | 273,253,236 | |
| (ಬಿ) ಇತರೆ ಚಾಲ್ತಿಯಲ್ಲಿರುವ ಹೊಣೆಗಾರಿಕೆಗಳು | 7 | 38,684,636,135 | | 27,054,939,025 | |
| (ಸಿ) ಅಲ್ಪಾವಧಿ ಒದಗಣೆಗಳು | 8 | 330,946,999 | 39,153,708,199 | 284,970,132 | 27,613,162,393 |
| **ಒಟ್ಟು** | | | **41,857,558,681** | | **29,754,068,750** |
| **ಸ್ವತ್ತುಗಳು** | | | | | |
| **1. ಚಾಲ್ತಿಯಲ್ಲದ ಸ್ವತ್ತುಗಳು** | | | | | |
| (ಎ) ಸ್ಥಿರಾಸ್ತಿಗಳು | | | | | |
| (i) ಸ್ಪಷ್ಟ ಸ್ವತ್ತುಗಳು | 9 | 370,677,546 | | 370,829,286 | |
| (ii) ಪ್ರಗತಿಯಲ್ಲಿನ ಕಾಮಗಾರಿಯ ಬಂಡವಾಳ | | 28,252,392 | | 18,049,308 | |
| (ಸಿ) ಮುಂದೂಡಿದ ತೆರಿಗೆ ಸ್ವತ್ತು (ನಿವ್ವಳ) | 10 | 88,787,930 | | 85,905,510 | |
| (ಡಿ) ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು | 11 | 1,195,519,503 | 1,683,237,371 | 1,175,784,663 | 1,650,568,767 |

| ವಿವರಗಳು | ಟಿಪ್ಪಣಿ ಸಂಖ್ಯೆ | 31-03-2014 ಕ್ಕೆ | | 31-03-2013 ಕ್ಕೆ | |
|---|---|---|---|---|---|
| | | ರೂ | ರೂ | ರೂ | ರೂ |
| **2. ಚಾಲ್ತಿ ಸ್ವತ್ತುಗಳು** | | | | | |
| (ಎ) ಚಾಲ್ತಿಯಲ್ಲಿರುವ ಬಂಡವಾಳ | 12 | - | | 2,900,000,000 | |
| (ಬಿ) ತಪಶೀಲು | 13 | 30,124,132,107 | | 19,740,558,026 | |
| (ಸಿ) ಸ್ವೀಕರಿಸಲಾದ ಟ್ರೇಡ್ | 14 | 101,719,631 | | 156,746,574 | |
| (ಡಿ) ನಗದು ಮತ್ತು ಅದರ ರೂಪದ್ದು | 15 | 9,777,922,216 | | 5,232,668,796 | |
| ಇ) ಇತರೆ ಚಾಲ್ತಿಯಲ್ಲಿರುವ ಸ್ವತ್ತುಗಳು | 16 | 170,547,356 | 40,174,321,310 | 73,526,587 | 28,103,499,983 |
| **ಒಟ್ಟು** | | | **41,857,558,681** | | **29,754,068,750** |

ಹಣಕಾಸು ತ:ಖ್ತೆಗಳಿಗೆ ಜೊತೆಗಿರುವ ಟಿಪ್ಪಣಿಗಳು (1-36) ನೋಡಿ.

ಲಗತ್ತಿಸಲಾದ ನಮ್ಮ ವರದಿಯಂತೆ
**ಮಲ್ಯ ಅಂಡ್ ಮಲ್ಯ**
ಚಾರ್ಟರ್ಡ್ ಅಕೌಂಟೆಂಟ್ಸ್
ನೋಂದಣಿ ಸಂಖ್ಯೆ. 001955S

ಸಹಿ/-
**(ಸಿ.ಎಸ್. ಪ್ರಶಾಂತ್)**
ಪಾಲುದಾರರು
ಸದಸ್ಯತ್ವ ಸಂಖ್ಯೆ. 218355

ಆಡಳಿತ ಮಂಡಳಿ ಪರವಾಗಿ

ಸಹಿ/-
**(ಹೆಚ್.ಪಿ. ಪ್ರಕಾಶ್)**
ವ್ಯವಸ್ಥಾಪಕ ನಿರ್ದೇಶಕರು

ಸಹಿ/-
**(ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು

ಸಹಿ/-
**(ಎಚ್.ಎಂ. ಮುಕುಂದಪ್ಪ)**
ಮುಖ್ಯ ಹಣಕಾಸು ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : 04-12-2014

## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್

ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು – 560009

# 31ನೇ ಮಾರ್ಚ್ 2014ರ ಅಂತ್ಯಕ್ಕೆ ಕೊನೆಗೊಳ್ಳುವ ಲಾಭ ಮತ್ತು ನಷ್ಟದ ತ:ಖ್ತೆ

| ವಿವರಗಳು | ಟಿಪ್ಪಣಿ ಸಂಖ್ಯೆ | 31.3.2014ಕ್ಕೆ ಕೊನೆಗೊಂಡ ವರ್ಷದಂತೆ<br>ರೂ | 31.3.2013ಕ್ಕೆ ಕೊನೆಗೊಂಡ ವರ್ಷದಂತೆ<br>ರೂ |
|---|---|---|---|
| **ಕಾರ್ಯಾಚರಣೆಯಿಂದ ಬಂದ ಆದಾಯ** | 17 | 13,197,185,702 | 10,874,795,203 |
| **ಇತರೆ ಆದಾಯ** | 18 | 432,500,237 | 544,303,236 |
| **ಒಟ್ಟು ಆದಾಯ** | | **13,629,685,939** | **11,419,098,439** |
| **ವೆಚ್ಚಗಳು** | | | |
| (ಎ) ಬಳಕೆಗೊಂಡ ಸಾಮಗ್ರಿಗಳ ಬೆಲೆ ಮತ್ತು ಇತರೆ ನಿರ್ಮಾಣ ವೆಚ್ಚಗಳು | 19 | 12,176,787,003 | 9,958,616,084 |
| (ಬಿ) ನೌಕರರ ಸೌಲಭ್ಯ ವೆಚ್ಚಗಳು | 20 | 226,234,259 | 462,403,111 |
| (ಸಿ) ಸವಕಳಿ ಮತ್ತು ಅಮೊರ್ಟೈಸೇಷನ್ ವೆಚ್ಚಗಳು | 9 | 10,286,432 | 9,581,945 |
| (ಡಿ) ಇತರೆ ವೆಚ್ಚಗಳು | 21 | 185,650,229 | 213,640,922 |
| **ಒಟ್ಟು ವೆಚ್ಚಗಳು** | | **12,598,957,923** | **10,644,242,062** |
| **ತೆರಿಗೆ ಮುನ್ನ ಲಾಭ** | | **1,030,728,016** | **774,856,377** |
| **ತೆರಿಗೆ ವೆಚ್ಚಗಳು** | | | |
| ಎ) ಆದಾಯ ತೆರಿಗೆ | | 341,530,000 | 210,751,952 |
| ಬಿ) ಹಿಂದಿನ ವರ್ಷಗಳ ತೆರಿಗೆ | | - | (3,023,350) |
| ಸಿ) ಹಿಂದಿನ ವರ್ಷಗಳ ಎಫ್‌ಬಿಟಿ | | 10,000 | - |
| ಡಿ) ಹಿಂದಿನ ವರ್ಷಗಳ ಸಂಪತ್ತು ತೆರಿಗೆ | | - | - |
| ಇ) ಚಾಲ್ತಿ ವರ್ಷದ ಸಂಪತ್ತು ತೆರಿಗೆ | | 969,473 | 984,128 |
| ಎಫ್) ಸೇರಿಸುವುದು/(ಕಡಿಮೆ) ಮುಂದೂಡಲಾದ ತೆರಿಗೆ ಹೊಣೆಗಾರಿಕೆ/(ಆಸ್ತಿ) | | (2,882,420) | 53,125,407 |
| **ಅವಧಿಯ ಲಾಭ/ (ನಷ್ಟ)** | | **691,100,963** | **513,018,240** |

| ವಿವರಗಳು | ಟಿಪ್ಪಣಿ ಸಂಖ್ಯೆ | 31.3.2014ಕ್ಕೆ ಕೊನೆಗೊಂಡ ವರ್ಷದಂತೆ | 31.3.2013ಕ್ಕೆ ಕೊನೆಗೊಂಡ ವರ್ಷದಂತೆ |
|---|---|---|---|
| | | ರೂ | ರೂ |
| **ಪ್ರತಿ ಷೇರಿನಿಂದ ಗಳಿಸಿದ ಹಣ** | | | |
| ಮೂಲ ಮತ್ತು ನಿಸ್ಸತ್ವ | | 5,642 | 4,188 |
| **ಕಂಪ್ಯೂಟಿಂಗ್‌ನಲ್ಲಿ ಉಪಯೋಗಿಸಿದ ಷೇರುಗಳ ಸಂಖ್ಯೆ ಮೂಲ ಮತ್ತು ನಿಸ್ಸತ್ವ ಗಳಿಸಿದ ಹಣ** | 2(a) | 122,500 | 122,500 |

ಹಣಕಾಸು ತ:ಖ್ತೆಗಳಿಗೆ ಜೊತೆಗಿರುವ ಟಿಪ್ಪಣಿಗಳು (1–36) ನೋಡಿ.

ಲಗತ್ತಿಸಲಾದ ನಮ್ಮ ವರದಿಯಂತೆ
**ಮಲ್ಯ ಅಂಡ್ ಮಲ್ಯ**
ಚಾರ್ಟರ್ಡ್ ಅಕೌಂಟೆಂಟ್ಸ್
ನೋಂದಣಿ ಸಂಖ್ಯೆ. 001955S

ಸಹಿ/–
**(ಸಿ.ಎಸ್. ಪ್ರಶಾಂತ್)**
ಪಾಲುದಾರರು
ಸದಸ್ಯತ್ವ ಸಂಖ್ಯೆ. 218355

ಆಡಳಿತ ಮಂಡಳಿ ಪರವಾಗಿ

ಸಹಿ/–
**(ಹೆಚ್.ಪಿ. ಪ್ರಕಾಶ್)**
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
**(ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು

ಸಹಿ/–
**(ಎಚ್.ಎಂ. ಮುಕುಂದಪ್ಪ)**
ಮುಖ್ಯ ಹಣಕಾಸು ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : 04–12–2014

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್

ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು - 560009

## 31ನೇ ಮಾರ್ಚ್ 2014ರಂದು ಅಂತ್ಯಗೊಂಡ ಹಣಕಾಸು ನಗದು ಹರಿಯುವಿಕೆಯ ತ:ಖ್ತೆ

